5

# ನಿರ್ಧಾರದ ಸಮಯ

# (1 ಅರಸು 18:1-40)

ಬೈಬಲಿನಲ್ಲಿ ಅತೀ ಮೈನವಿರೇಳಿಸುವ ಅಧ್ಯಾಯವೆಂದರೆ 1 ಅರಸು 18. ಈ ಅಧ್ಯಯವು, "ದೇವರ ಯುದ್ಧ," ಕರ್ಮೆಲ ಬೆಟ್ಟದಲ್ಲಿ ಮುಖಾಮುಖಿ, "ಬೆಂಕಿಯ ಮೂಲಕ ಉತ್ತರಿಸುವ ದೇವರು," ಹೀಗೆ ಅನೇಕ ಸುಂದರವಾದ ಪ್ರಸಂಗಗಳ ಶೀರ್ಷಿಕೆಗೆ ಸ್ಫೂರ್ತಿಯಾಗಿದೆ. ನಾನು ಇದನ್ನು "ಎರಡು ಅಭಿಪ್ರಾಯಗಳ ಮಧ್ಯೆ ಕುಂಟುವದು," ಅಥವಾ "ನಿರ್ಧಾರದ ಸಮಯ," ಎಂದು ಕರೆಯಲು ಬಯಸುತ್ತೇನೆ!

ಈ ಶ್ರೇಷ್ಠ ಅಧ್ಯಾಯವು ಎದುರಿಸುವ ಸರಮಾಲೆಯನ್ನೇ ಚಿತ್ರಿಸುವುದಾಗಿದೆ. ಎಲೀಯನು ಪದೇಪದೇ ಒಬ್ಬನು ಮತ್ತು ಹೆಚ್ಚಾದವರಿಂದ ಎದುರಿಸುವುದಕ್ಕೆ ಒಳಗಾದನು.

## ದಿವ್ಯವಾದ ಎದುರಿಸುವಿಕೆ (18:1, 2ಎ)

ನಾವು ಮೊದಲು ದೇವರು ಮತ್ತು ಎಲೀಯರ ಮಧ್ಯೆ ಸಂಧಿಸುವಿಕೆಯು ಇದೆ:

> ಅನೇಕ ದಿವಸಗಳಾದ ನಂತರ ಎಲೀಯನಿಗೆ ಯೆಹೋವನ ವಾಕ್ಯ ವುಂಟಾಯಿತು, ಬರಗಾಲದ ಮೂರನೆಯ ವರ್ಷದಲ್ಲಿ ಆತನು ಅವನಿಗೆ "ನೀನು ಹೋಗಿ ಅಹಾಬನನ್ನು ಕಾಣು; ನಾನು ದೇಶಕ್ಕೆ ಮಳೆ ಕೊಡುತ್ತೇನೆ" ಅಂದನು (ವಚನ 1).

"ಮೂರನೆಯ ವರ್ಷದಲ್ಲಿ" ಬಹುಶಃ ಇದು ಎಲೀಯನು ಚಾರೆಪ್ತಾದಲ್ಲಿರುವ ಸಮಯವನ್ನು ಸೂಚಿಸುವುದಾಗಿತ್ತು.[1] ಬರವು ಮೂರು ವರ್ಷ ಆರು ತಿಂಗಳು ಇತ್ತು (ಲೂಕ 4:25; ಯಾಕೋಬ 5:17). ಮೂರು ವರ್ಷಕ್ಕಿಂತ ಹೆಚ್ಚು ದಿನಗಳವರೆಗೆ ಬಾಳನು ಮಳೆಯನ್ನು ಸುರಿಸದಿದ್ದುದನ್ನು ಜನರು ನೋಡಿದ್ದರು. ದೇವರು ತನ್ನ ಜನರನ್ನು ತನ್ನೆಡೆಗೆ ಹಿಂದಕ್ಕೆ ಕರೆಯಲು ಇದೇ ಸರಿಯಾದ ಸಮಯ ಎಂದು ನಿರ್ಧರಿಸಿದನು, ಹೀಗೆ ತಿರುಗೊಂದಾವರ್ತಿ "ಎಲೀಯನಿಗೆ ಯೆಹೋವನ ವಾಕ್ಯವುಂಟಾಯಿತು." ದೇವರು ತನ್ನ ಯೋಜನೆಯ ಮುಂದಿನ ಹೆಜ್ಜೆಗೆ ಸಿದ್ಧನಾದನು.

ಎಂದಿನಂತೆ ದೇವರು ಮಾತನಾಡಲು ಎಲೀಯನು ವಿಧೇಯನಾದನು ಹೀಗೆ: "ಎಲೀಯನು ಅಹಾಬನನ್ನು ನೋಡುವುದಕ್ಕೆ ಹೊರಟನು" (ವಚನ 2ಎ).

## ದೈವನಿಯಾಮಕ ಸಂಧಿಸುವಿಕೆ (18:2ಬಿ-16)

ಈ ಉಪಕಥೆಯು ಎಲೀಯ ಮತ್ತು ಆಹಾಬರು ಹೇಗೆ ಒಟ್ಟಿಗೆ ಸೇರಿದರು ಎಂದು ಹೇಳುತ್ತದೆ (ವಚನಗಳು 2ಬಿ-16). ಈ ಸಂಧಿಸುವಿಕೆಯು ಕರ್ತನಲ್ಲಿ ನಂಬಿಗಸ್ತನಾದ ಒಬದ್ಯ ಮತ್ತು ಎಲೀಯರಲ್ಲಿ ಕಾಣಿಸಿಕೊಳ್ಳುತ್ತದೆ.[2]

ಅಹಾಬನು ತನ್ನ ಸೇವಕನಾದ ಒಬದ್ಯನನ್ನು ಆಹಾಬನ ಪ್ರಾಣಿಗಳಿಗಾಗಿ ಹುಲ್ಲುಗಾವಲುಗಳನ್ನು ಹುಡುಕಲು ಕಳುಹಿಸಿದ್ದನು. ಒಬದ್ಯನು ಹುಡುಕುತ್ತಿದ್ದಂತೆ, ಆತನು ಎಲೀಯನನ್ನು ಭೇಟಿಯಾದನು. ಎಲೀಯನು ಆತನಿಗೆ "ಎಲೀಯನು ಬಂದಿದ್ದಾನೆ" (ವಚನ 11). ಎಂದು ಆತನ ಒಡೆಯನಿಗೆ (ಅಹಾಬನಿಗೆ) ತಿಳಿಸಲು ಹೇಳಿದನು. ಇದು ಒಬದ್ಯನಿಗೆ ನಡುಕವನ್ನು ಉಂಟುಮಾಡಿತು, ಯಾಕೆಂದರೆ ಎಲೀಯನು ಕಾಣಿಸಿಕೊಂಡ ಮಾರ್ಗದಲ್ಲಿಯೇ

ಈಗಲೂ ಮತ್ತು ಆಗಲೂ ಒಮ್ಮಲೇ ಅದೃಷ್ಯನಾಗಿಬಿಡುತ್ತಿದ್ದನು. ಎಲೀಯನು ಹೋದಾಗ ಅಹಾಬನು ಬಂದದ್ದಾರೆ ಅಹಾಬನು ಕೋಪೋದ್ರೇಕದಿಂದ ಕೊಂದುಹಾಕುವನು ಎಂದು ಒಬದ್ಯನು ಹೆದರಿದನು (ವಚನಗಳು 9-12). ಎಲೀಯನು ಆತನಿಗೆ ಅಭಯ ಸೂಚಿಸುತ್ತಾ "ನಾನು ಸನ್ನಿಧಿ ಸೇವೆ ಮಾಡುತ್ತಿರುವ ಸೇನಾಧೀಶ್ವರನಾದ ಯೆಹೋವನಾಣೆ, ಈ ಹೊತ್ತು ಹೇಗೋ ಅಹಾಬನಿಗೆ ಕಾಣಿಸಿಕೊಳ್ಳುವೆನು ಅಂದನು" (ವಚನ 15).

## ರಾಜತ್ವದ ಸಂಧಿಸುವಿಕೆ (18:17-20)

ಈ ಬೇಟಿ ರಾಜತ್ವದ ಸಂಧಿಸುವಿಕೆಗೆ ನಡಿಸಿತು. "ಒಬದ್ಯನು ಆಹಾಬನ ಬಳಿಗೆ ಹೋಗಿ ಅವನಿಗೆ ಈ ಮಾತನ್ನು ತಿಳಿಸಿದನು; ಆಹಾಬನು ಎಲೀಯನನ್ನು ಎದುರುಗೊಳ್ಳುವುದಕ್ಕೆ ಹೊರಟು ಹೋಗಿ ಅವನನ್ನು ಕಂಡನು" (ವಚನ 16). ಆಹಾಬ ಮತ್ತು ಎಲೀಯರು ಮೂರು ವರ್ಷಗಳಲ್ಲಿ ಮೊದಲಬಾರಿ ಮುಖಾಮುಖಿಯಾಗಿ ಎದುರಾದರು.

ಈ ಸಂಧಿಸುವಿಕೆಯನ್ನು ನಿಜವಾಗಿ ಅರ್ಥೈಸಿಕೊಳ್ಳಬೇಕಾದರೆ 2ನೇಯ ವಚನದ ಕೊನೆಗೆ ಹಿಂದಕ್ಕೆ ಹೋಗುವಾ "ಆಗ ಸಮಾರ್ಯದಲ್ಲಿ ಬರವು ಬಲು *ಘೋರವಾಗಿತ್ತು.*" (ಒತ್ತಿ ಹೇಳಿದ್ದು ನನ್ನದು.) ದೇಶದಲ್ಲಿ ಸಂಗತಿಗಳು ಬಲು ಕೆಟ್ಟದ್ದಾಗಿದ್ದವು. ಪ್ರಾಚೀನ ಜಾನಪದದ ನಂಬುಗೆ ಏನೆಂದರೆ ಶಾಪವನ್ನು ನಿವಾರಿಸುವ ಒಂದು ವಿಧ ಎಂದರೆ ಶಾಪವನ್ನು ಉಸಿರಿಸಿದವರನ್ನು ನಾಶಮಾಡುವದೇ ಆಗಿತ್ತು. ಆದ್ದರಿಂದ, ಆಹಾಬನು ಎಲೀಯನನ್ನು ವರುಷಗಳಿಂದಲೂ ಹುಡುಕುತ್ತಿದ್ದನು ಒಬದ್ಯನು ಎಲೀಯನಿಗೆ, "ನನ್ನ ಒಡೆಯನು ನಿನ್ನನ್ನು ಹುಡಕಲು ತನ್ನ ಸೇವಕರನ್ನು ಅಟ್ಟಿದನು" (ವಚನ 10) ಎಂದು ಹೇಳಿದನು. ಈಗ ಒಮ್ಮಲೇ ಎಲೀಯನು ಆಹಾಬನ ಮುಂದೆ ಮತ್ತೊಂದಾವರ್ತಿ ಪ್ರತ್ಯಕ್ಷನಾದನು.

ಆಹಾಬನು ಕುದುರೆ ಸವಾರಿ ಮಾಡುತ್ತಿರುವ ಚಿತ್ರವನ್ನು ಚಿತ್ರಿಸಿರಿ. ಆತನ ಮುಂದೆ ವಿಸ್ತಾರವಾಗಿ ಹರಡಿರುವ ಕಾಲುಗಳ ಜೊತೆ ಹಿಂದಕ್ಕೆ ಮುಷ್ಟಿಯನ್ನು ಕಟ್ಟಿ ಆತನ ಒರಟಾದ ಗಾಳಿಯನ್ನು ಹುರುದುಂಬಿಸುವಂತಿರುವ ಆತನ ಬಟ್ಟೆಗಳು ಮತ್ತು ತಲೆಯನ್ನೇ ಬಾಚದ ಕೂದಲುಗಳುಳ್ಳ, ಹೆಚ್ಚು ಕಡಿಮೆ ಆಹಾಬನ ಪರಮ ವೈರಿ ಆಗಿರುವ ಎಲೀಯನು ಆತನ ಮುಂದೆ ನಿಂತಿದ್ದಾನೆ! ಆಹಾಬನು "ಇಸ್ರಾಯೇಲ್ಯರಿಗೆ ಆಪತ್ತನ್ನು ಬರಮಾಡಿದವನೇ ಬಂದಿಯಾ" (ವಚನ 17) ಎಂದನು. ಇನ್ನೊಂದು ಮಾತಿನಲ್ಲಿ, "ಒಣಗಿ ಹೋದ ಹುಲ್ಲನ್ನು ಮತ್ತು ಸತ್ತು ಹೋದ ಮರಗಳನ್ನು ಪ್ರಾಣಿಗಳ ಒಣಗಿದ ಎಲುಬುಗಳನ್ನೂ ಹಸಿವೆಯಿಂದ ಅಳುತ್ತಿರುವ ಜನರನ್ನೂ ನೀನು ನೋಡಿದಿಯಾ? ಇದೆಲ್ಲವೂ ನಿನ್ನ ತಪ್ಪಾಗಿದೆ ನೀನು ಈ ನೆಲವನ್ನು ತೊಂದರೆಗೀಡು ಮಾಡಿದ್ದಿ!" ದೇಶದ ಮೇಲೆ ಬಂದ ಈ ಆಪತ್ತು ತನ್ನ ಸ್ವಂತ ಪಾಪದಿಂದಲೇ ಬಂದದ್ದು ಎಂಬುದನ್ನು ಅರಿತುಕೊಳ್ಳುವ ಬದಲು, ಆಹಾಬನು ಇಸ್ರಾಯೇಲಿನ ತೊಂದರೆಗಳನ್ನು ಎಲೀಯನ ಮೇಲೆ ಹಾಕಿದನು.

ಇದು ವಿಶಿಷ್ಟವಾದುದಲ್ಲವೇ? ಏದೆನ ತೋಟದಿಂದ ಮಾನವನು ತನ್ನ ತೊಂದರೆಗಳಿಗಾಗಿ ಇತರರನ್ನು ದೂಷಿಸುತ್ತಲೇ ಬಂದಿದ್ದಾನೆ. ನಾನು ಒಬ್ಬ ಸ್ತ್ರೀಯೊಡನೆ ಮಂತ್ರಾಲೋಚನೆಯನ್ನು ನಡೆಸುತ್ತಿದ್ದೆನು ಅವಳ ಗಂಡನು ಕೋಪದ್ರೇಕದಲ್ಲಿ ಹಾರಾಡುತ್ತಾ ಕಿಡಕಿಯ ಗಾಜಿನ ಮೂಲಕ ತನ್ನ ಮುಷ್ಟಿಯನ್ನು ದೂಡುತ್ತಿದ್ದನು. ತನ್ನ ಮುಂಗೈ ಕತ್ತರಿಸುವವರೆಗೂ ಹಿಡಿಯುತ್ತಿದ್ದನು, ಮುಂಗೈ ರಕ್ತದಿಂದ ಸುರಿಯುತ್ತಿರುವಂತೆಯೇ "ನೋಡು ನೀನೇನು ಮಾಡುವಂತೆ ಮಾಡಿದೆ ನನ್ನನು" ಎಂದು ಕೂಗುತ್ತಿದ್ದನು.

ಎಲೀಯನು ಭಯತಪ್ತನಾಗಲಿಲ್ಲ. ಬದಲಾಗಿ, ಆತನು ಯಾರು ದೋಶಾರೋಪಣಕ್ಕೆ ಯೋಗ್ಯರೋ ಅವರ ಮೇಲೆ ಆರೋಪವನ್ನು ಮಾಡಿದನು: "ಆಪತ್ತು ಬರಮಾಡಿದವನು ನಾನಲ್ಲ; ಯೆಹೋವನ ಆಜ್ಞೆಗಳನ್ನು ಉಲ್ಲಂಘಿಸಿ ಬಾಳನ ವಿಗ್ರಹಗಳನ್ನು ಪೂಜಿಸಿದ ನೀನೂ ನಿನ್ನ ಮನೆಯವರೂ ಅದಕ್ಕೆ ಕಾರಣ"[3] (ವಚನ 18). ಇನ್ನೊಂದು ಮಾತಿನಲ್ಲಿ ಆತನು "ಈ

ಆಪತ್ತು ಬರುವುದಕ್ಕೆ ಕಾರಣ ನಿನ್ನ ಸ್ವಂತ ಪಾಪವೇ'' ಎಂದು ಹೇಳುತ್ತಿದ್ದಾನೆ.

ಮುಖ್ಯ ಅಂಶಗಳಿಗಾಗಿ ನಾವು ಸ್ವಲ್ಪ ನಿಲ್ಲೋಣ. ಕಾಲದಿಂದ ಕಾಲಕ್ಕೆ ಜನರು ಚರ್ಚನಲ್ಲಿ ಆತ್ಮೀಯವಲ್ಲದ ಅಭ್ಯಾಸಗಳನ್ನು ಪರಿಚಯಿಸಲು ಪ್ರಯತ್ನಿಸುತ್ತಲೇ ಇದ್ದಾರೆ. ಇತರರು ವಿರೋಧಿಸಿದಾಗ, ಹೊಸ ಆಚರಣೆಗಳ್ನು ಪರಿಚಯಿಸಿದಂತವರು ಹೇಳುವುದೇನೆಂದರೆ, ''ನೀವು ಕೇವಲ ತೊಂದರೆ ಮಾಡುವವರು''[4] ಎಂದು ಎಲೀಯನು ಹೇಗೆ ಉತ್ತರಿಸಬಹುದು ''ಇಲ್ಲ! ದೇವರ ಮಾರ್ಗಗಳನ್ನು ಮರೆತುಬಿಟ್ಟಂತವರು ಆತ್ಮೀಕ ಇಸ್ರಾಯೇಲರಿಗೆ ತೊಂದರೆದಾಯಕರಾಗಿದ್ದಾರೆ!''

ಎಲೀಯನು ಆಹಾಬನಿಗೆ ''ಈಗ ನೀನು ಎಲ್ಲಾ ಇಸ್ರಾಯೇಲ್ಯರನ್ನೂ ಇಜೆಬೇಲಳಿಂದ ಪೋಷಣೆ ಹೊಂದುವ ಬಾಳನ ನಾನೂರೈವತ್ತು ಮಂದಿ ಪ್ರವಾದಿಗಳನ್ನೂ ಆಶೇರು ದೇವತೆಯ ನಾನೂರು ಮಂದಿ ಪ್ರವಾದಿಗಳನ್ನೂ ಕರ್ಮೆಲ್ ಬೆಟ್ಟಕ್ಕೆ ಕಳಿಸು ಎಂದು ಹೇಳಿದನು'' (ವಚನ 19).

ಕರ್ಮೆಲ ಬೆಟ್ಟವು ಮೆಡಿಟರೇನಿಯನ್ ಸಮುದ್ರದ ಅಂಚಿನಲ್ಲಿ, ಗಲಿಲಾಯ ಸಮುದ್ರದ ಪಶ್ಚಿಮದಲ್ಲಿ[5] ಸ್ಥಿತ್ಯವಾಗಿದೆ. ಈ ಪ್ರದೇಶವು ಬಹುಶಃ ಅನೇಕ ಕಾರಣಗಳಿಗಾಗಿ ಆಯ್ಕೆಯಾಗಿರಬಹುದು. ಅನೇಕವುಗಳಿಂದ ಪವಿತ್ರ ಸ್ಥಳ ಎಂದು ಪರಿಗಣಿಸಲ್ಪಟ್ಟಿದೆ. ಇದೊಂದು ಎತ್ತರದ ಪ್ರದೇಶವಾಗಿದ್ದು ಮೂರ್ತಿ ಪೂಜೆಯು ತೆಗೆದು ಹಾಕಿ ನಿಜದೇವರ ಆರಾಧನೆಯು ಮಾಡಲ್ಪಟ್ಟ ಸ್ಥಳ ಇದು. ಎಲೀಯನಿಗೆ ಅವಶ್ಯವಾದ ಪ್ರತಿಯೊಂದಕ್ಕೂ ಇದೊಂದು ಉತ್ತಮವಾದ ಸ್ಥಳವಾಗಿತ್ತು.

ಇಸ್ರಾಯೇಲಿನ ಎಲ್ಲರೂ ದೇವರಿಂದ ದೂರ ಹೋಗುವದರಲ್ಲಿ ಒಳಗೊಂಡಿರುವುದರಿಂದ, ಎಲೀಯನು ಅಲ್ಲಿನ ಪ್ರತಿಯೊಂದು ಕುಟುಂಬದ ಪ್ರತಿನಿಧಿಗಳು ಅಲ್ಲಿರಬೇಕೆಂದು ಬಯಸಿದ್ದನು. ವಿಶೇಷವಾಗಿ ಅಲ್ಲಿ ಬಾಳನ ಪ್ರವಾದಿಗಳು: ಬಾಳನ 450 ಪ್ರವಾದಿಗಳು ಮತ್ತು ಅಶೇರು ದೇವತೆಯ 400 ಪ್ರವಾದಿಗಳು ಬಾಳದೇವತೆ ಭಾಗವಾದ ಸ್ತ್ರೀಯ ಪ್ರತಿರೂಪಗಳು ಅಲ್ಲಿರಬೇಕೆಂದು ಎಲೀಯನು ಬಯಸಿದ್ದನು. ನಂತರ, ಸ್ತ್ರೀ ಪುರುಷರಿಬ್ಬರೂ ಬಹುಶಃ ''ಇಜೆಬೇಲಳ ಜೊತೆ ಊಟಮಾಡುತ್ತಿದ್ದರು'' ಎಂದು ಹೇಳ ಬಹುದು. ಅವರು ಅವಳ ವೈಯಕ್ತಿಕವಾದ ರಕ್ಷಣೆಯಲ್ಲಿ ಇದ್ದರು.

''ಹೀಗೆ ಆಹಾಬನು ಇಸ್ರಾಯೇಲ್ಯರನ್ನೂ ಎಲ್ಲಾ ಪ್ರವಾದಿಗಳನ್ನೂ ಅಲ್ಲಿಗೆ ಕರೆಯಿಸಿದನೂ'' (ವಚನ 20). ''ಬಾಳನ ಪ್ರವಾದಿಗಳು ಎಂದು ಸೂಚಿತರಾದವರು 450 ಜನ ಇಲ್ಲಿ ಇದ್ದಾರೆ'' (ವಚನ 22). ಅಶೇರು ದೇವತೆಯ 400 ಜನ ಪ್ರವಾದಿಗಳು ಆ ಕೂಟಕ್ಕೆ ಬರಲಿಲ್ಲ ಇಜೆಬೇಲಳು ಅವರನ್ನು ಬರುವದಕ್ಕೆ ಅವಕಾಶವನ್ನು ಕೊಟ್ಟಿರಲಿಕ್ಕಿಲ್ಲ; ಆಹಾಬನು ಅವರ ಮೇಲೆ ನಿಯಂತ್ರಣವನ್ನು ಹೊಂದಿಲ್ಲದಿರಬಹುದು.

ಎಲೀಯನು ಏನನ್ನು ಮಾಡಲು ಹೇಳಿದನೋ ಆಹಾಬನು ಅದನ್ನು ಯಾಕೆ ಮಾಡಿದನು? ಆತನಿಗೆ ಅನೇಕ ಕಾರಣಗಳು ಇದ್ದವು. ಬಹುಶಃ ಬರವು ಯಾವುದೇ ರೀತಿಯಲ್ಲಿ ಕೊನೆಗೊಳ್ಳಲೆಂದು ಆತನು ಪ್ರಯತ್ನಿಸುತ್ತಿರಬಹುದು. ಬಾಳನ 450 ಪ್ರವಾದಿಗಳು ತಾನು ಮಾಡಲು ಅಸಮರ್ಥನಾಗಿದ್ದನು ಅವರು ಮಾಡಬಹುದೆಂದು: ಎಲೀಯನು ಅವರ ಮೂಲಕ ನಾಶವಾಗಬಹುದೆಂದು ಆತನು ಯೋಚಿಸಿರಬಹುದು. ಬಹುಶಃ ಇದು ಒಂದು ಪ್ರವಾದಿಗಳ ಶಕ್ತಿಯುತ ಪ್ರಭಾವದ ಸಂಕೇತವಾಗಿರಬಹುದು.

## ವೈಯಕ್ತಿಕ ಸಂಧಿಸುವಿಕೆ (18:21-24)

ವಚನ 21ರ ಆರಂಭದಲ್ಲಿನ ಕರ್ಮೆಲ್ ಬೆಟ್ಟದಲ್ಲಿನ ದೃಷ್ಯದೆಡೆಗೆ ನಮ್ಮ ಗಮನವನ್ನು ಹರಿಸುವಾ.

ಒಂದೆಡೆ ಬಾಳನ 450 ಪ್ರವಾದಿಗಳು ಮತ್ತು ಅವರ ಜೊತೆಗಾರರು ಇದ್ದಾರೆ. ''450''

ಎಂದು ಹೇಳುವದು ಅಷ್ಟೊಂದು ಸ್ಫೂರ್ತಿದಾಯಕವಾದುದಲ್ಲ, ಆದರೆ ನಮ್ಮ ಸಭೆಯ ಸಂಖ್ಯೆಯೊಡನೆ ಅದನ್ನು ಹೋಲಿಸಿಲಿ[6] ಇದೊಂದು ರೀತಿಯ ಒಳ್ಳೇಯ ಗಾತ್ರದ ಸಂಖ್ಯೆಯಾಗಿದೆ! ಈಗ ಆ 450ನ್ನು ಊಹಿಸಿಕೊಳ್ಳಿರಿ, ಕಟ್ಟುಮಸ್ತಾದ ಉದ್ದನೆಯ ದೇಹ, ಹರಿದಾಡುವ ಕೂದಲು, ವೈಭವಪೂರಿತವಾದ ಜಾಂಬಳಿ ಮಿಶ್ರಿತ ಬಂಗಾರವರ್ಣದ ನಿಲುವಂಗಿಗಳನ್ನು ಧರಿಸಿದ್ದರು ಪ್ರತಿಯೊಬ್ಬರ ಎದೆಯ ಮೇಲೂ ಬಾಳನ ಕಿರೀಟವೆಂದು ನಂಬುತ್ತಿದ್ದ ಹೊಳೆಯುವ ಲೋಹದ ಬಿಲ್ಲೆಯು ಇದ್ದು ಸೂರ್ಯನ ಕಿರಣಕ್ಕೆ ಹೊಳೆಯುತ್ತಿತ್ತು. ಹತ್ತಿರದಲ್ಲೇ ಅರಸ ಮತ್ತು ಆತನ ಜೊತೆಗಾರರೂ ಇದ್ದರು.

ಇದು *ಸೈನಿಕರ* ಶಿಬಿರವಾಗಿತ್ತು. ದಿನವು ಮುಗಿಯುವ ಮೊದಲು ಬಾಳನ ಪ್ರವಾದಿಗಳು ಈಟಿ ಕತ್ತಿಗಳಿಂದ ರಕ್ತಸೋರುವಷ್ಟು ಗಾಯಮಾಡಿಕೊಂಡರು (ವಚನ 28).

ಸಾವಿರಾರು ಜನ ಇಸ್ರಾಯೇಲ್ಯರು ನೋಡುತ್ತಿದ್ದಾರೆ: ಬಲು ಮುಖ್ಯವಾದ ಜನರು, ನಾಯಕರು ಅದರೊಡನೆ ಇನ್ನೂ ಇತರರು ಅಲ್ಲಿದ್ದರು. (ಸಾಂಪ್ರದಾಯಿಕ ಘಟನಾ ಸ್ಥಳದಲ್ಲಿ, ಕೆಳಗಿನ ಸಾವಿರಾರು ಜನ ಅಲ್ಲಿ ನಡೆಯುತ್ತಿದೆ ಎಂಬುದನ್ನು ವೀಕ್ಷಿಸಬಹುದಾದ ದೊಡ್ಡ ಸ್ಥಳ ಅದಾಗಿತ್ತು.) ಅದೊಂದು ಹಸಿವಿನಿಂದ ನೋಡುತ್ತಿದ್ದ ಗುಂಪಿನಂತೆ ಕಾಣುತ್ತಿತ್ತು. ಅನೇಕರು, ಮೂರಕ್ಕಿಂತ ಹೆಚ್ಚಿನ ವರುಷದ ಬರದ ನಂತರದ ದುರ್ಬಲವಾಗಿದ್ದಾರೆ ಎಂಬುದು ನನಗೆ ಖಚಿತವೆನ್ನಿಸುತ್ತದೆ.

ಇನ್ನೊಂದೆಡೆಯಲ್ಲಿ, ಒಬ್ಬ ಮನುಷ್ಯನು, ಈ ಒರಟನಾದ ದೇವರ ಸಂದೇಶಕನಾದ ಎಲೀಯನಿಂದಲೇ ಎಲ್ಲವೂ ಆಯಿತು. ಎಲೀಯನಿಗಾಗಿ ದುಃಖಪಡ ಬೇಡಿರಿ. ಆತನು ಇಸ್ರಾಯೇಲಿನಲ್ಲಿ ದೇವರ ಸೇವೆಗಾಗಿ ದೇವರ ಮನುಷ್ಯನಾಗಿದ್ದು, ದೇವರ ಕಾರ್ಯಗಳನ್ನು ಮಾಡುವವನಾಗಿದ್ದಾನೆ. ಬೆಸ ಸಂಖ್ಯೆಯು 450 ರಿಂದ 1, ಅಥವಾ 1,000 ದಿಂದ 1 ಅಲ್ಲ. ಬದಲಾಗಿ ಬೆಸಸಂಖ್ಯೆಯು 1,000 ದಿಂದ 1+ *ದೇವರು ಆಗಿದೆ*: "ದೇವರು ನಮ್ಮೊಂದಿಗಿದ್ದರೆ ನಮ್ಮನ್ನು ಎದರಿಸುವವರಾರು?" (ರೋಮಾಪುರ 8:31; ಒತ್ತಿ ಹೇಳಿದ್ದು ನನ್ನದು).

ಎಲೀಯನು ನಿಯಂತ್ರಣದಲ್ಲಿ ಇದ್ದನು. ಈ ಅಧ್ಯಾಯದಲ್ಲಿ ಎಲೀಯನು ಅನೇಕ ಸಾರಿ ಮಾತನಾಡಿದ್ದಾನೆ. ಆತನು ಪ್ರತಿಸಾರಿ ಮಾತನಾಡುವಾಗ ಅಧಿಕಾರದಿಂದ ಮಾತನಾಡುತ್ತಾನೆ; ಸಾಮಾನ್ಯವಾಗಿ, ಇದು ಆಜ್ಞೆಯಾಗಿರುತ್ತದೆ. ಆತನು ಒಬದ್ಯನಿಗೆ "ನೀನು ಹೋಗಿ ನಿನ್ನ ಒಡೆಯನಿಗೆ ಎಲೀಯನು ಬಂದಿದ್ದಾನೆ ಎಂದು ಹೇಳು ಎಂದು ಆಜ್ಞೆ ಮಾಡಿದನು. ಆಹಾಬನಿಗೆ ಪ್ರತಿಯೊಬ್ಬರನ್ನೂ ಕರ್ಮೆಲಬೆಟ್ಟಕ್ಕೆ ಕರಿಸು" ಎಂದು ಆಜ್ಞಾಪಿಸಿದನು. ನಂತರ ಆತನು ಬಾಳನ ಪ್ರವಾದಿಗಳಿಗೆ "ಹೋರಿಯನ್ನು ಆರಿಸಿಕೊಂಡು ಸಿದ್ಧಪಡಿಸಿರಿ" ಎಂದು ಆಜ್ಞಾಪಿಸಿದನು. ಆತನು ಜನರಿಗೆ ನಂತರ ಅರಸನಿಗೆ ಮತ್ತೇ ಆಜ್ಞಾಪಿಸಿದನು. ಎಲೀಯನು ನಿಯಂತ್ರಣದಲ್ಲಿ ಇದ್ದನು.

ಮನೆಯಲ್ಲಿ, ಕಾರ್ಯದಲ್ಲಿ, ಶಾಲೆಯಲ್ಲಿ ನೀನು ದೇವರಿಗಾಗಿ ಏಕಾಂತವಾಗಿ ನಿಂತಾಗ ಈ ಕಥೆಯಿಂದ ಹೃದಯಭಾಗವನ್ನು ತೆಗೆದುಕೊಳ್ಳಿರಿ. ನೀವು ದೇವರ ಯೋಜನೆ ಮತ್ತು ಉದ್ದೇಶಗಳಿಗಾಗಿ ಸಮವಾಗಿ ನಿಂತಿರುವಿರಿ ಎಂದು ನೀವು ತಿಳಿದುಕೊಂಡಾಗ, ನೀನು ನಿನ್ನ ಪರಿಸ್ಥಿತಿಗಳ ನಿಯಂತ್ರಣದಲ್ಲಿರಬಹುದು.

ನಾವು ನೋಡಿದಂತಹ ಎಲೀಯ ಮತ್ತು ಇಸ್ರಾಯೇಲಿನ ಜನರ ಮಧ್ಯದ ವೈಯಕ್ತಿಕ ಸಂಧಿಸುವಿಕೆಯ ಸನ್ನಿವೇಶವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳರಿ. ಕರ್ಮೆಲ ಬೆಟ್ಟದಲ್ಲಿ ಎಲೀಯನು ಮಾತನಾಡಲು ಆರಂಭಿಸಿದಂತೆ, ಆತನು ಬಾಳ ಪ್ರವಾದಿಗಳೊಡನೆ ಅಥವಾ ಅರಸನೊಡನೆ ಮಾತನಾಡಲಿಲ್ಲ. ಆದರೆ ಜನರೊಡನೆ ಮಾತನಾಡಿದನು. ಬಾಳನ ಪ್ರವಾದಿ ಗಳು ನಿಷ್ಪ್ರಯೋಜಕ ಸಂಗತಿಗಳಾಗಿದ್ದರು, ಅವರನ್ನು ಪರಿವರ್ತಿಸಲು ಎಲೀಯನು ಯಾವ ಶ್ರಮವನ್ನೂ ಪಡಲಿಲ್ಲ. ಅಷ್ಟಲ್ಲದೇ ಅರಸನನ್ನು ಪ್ರಭಾವಿತಗೊಳಿಸುವದು ಅವನಿಗೆ ಬೇಕಿತ್ತು, ಆದರೆ ಆತನು ಮೊದಲು ಅರಸನನ್ನು ಉದ್ದೇಶಿಸಿ ಮಾತನಾಡಲಿಲ್ಲ. ಈ ವಿಷಯದಲ್ಲಿ

ಆತನ ಕಾಳಜಿಯು ಜನರೊಡನೆಯೂ ಚಂಚಲರಾದ ಜನರನ್ನು ದೇವರೊಡನೆ ಸಂಧಾನ ಮಾಡಬೇಕೆಂದಿತ್ತು.

ಎಲೀಯನು ಅವರಿಗೆ, "ಎಷ್ಟರವರೆಗೆ ಎರಡು ಮನಸ್ಸುಳ್ಳವರಾಗಿರುವರಿ? ಯೆಹೋವನು ದೇವರಾಗಿದ್ದರೆ ಆತನನ್ನೇ ಹಿಂಬಾಲಿಸರಿ; ಬಾಳನು ದೇವರಾಗಿದ್ದರೆ ಆತನನ್ನೇ ಹಿಂಬಾಲಿಸಿರಿ" (ವಚನ 21ಎ) ಎಂದು ಹೇಳಿದನು. ಎರಡು ಮನಸ್ಸುಳ್ಳವರು ಎಂಬುದರ ಇಬ್ರಿಯ ಪದದ ಭಾಷಾಂತರವು ಕುಂಟನಾಗಿರುವದು ಎಂಬುದನ್ನು ಸೂಚಿಸುವುದಾಗಿದೆ. RSVಯಲ್ಲಿ "ಎರಡು ವಿಭಿನ್ನ ಸಂಗತಿಗಳೊಡನೆ ನೀವು ಎಷ್ಟು ಸಮಯ ಕುಂಟುತ್ತಾ ಸಾಗುವಿರಿ?" ಎಂದಿದೆ. ಹುಟ್ಟಿನಿಂದಲೇ ಕುಂಟನಾದವನು ಅಥವಾ ಅಪಘಾತದಲ್ಲಿ ಕಾಲನ್ನು ಕಳೆದು ಕೊಂಡವನನ್ನು ಊಹಿಸಿಕೊಳ್ಳಿರಿ ಆತನು ಇತರರಿಗಿಂತ ಗಿಡ್ಡನಾಗಿರುತ್ತಾನೆ. ಇಲ್ಲೊಂದು ರೂಪಕವು ಬಳಸಲ್ಪಟ್ಟಿದೆ, ಒಂದು ಕಾಲು ಯೆಹೋವನ ಆರಾಧನೆಯನ್ನು ಪ್ರತಿನಿಧಿಸಿದರೆ, ಇನ್ನೊಂದೆಡೆಯಲ್ಲಿ ಬಾಳನ ಆರಾಧನೆಯು ಪ್ರತಿನಿಧಿಸುವದಾಗಿದೆ. ಅವುಗಳು ಹೊಂದಿಕೆಯಾಗವು. ಎಲೀಯನು "ನೀವು ಆರಿಸಬೇಕಾದ ಸಂಗತಿಯಲ್ಲಿ ನಿನ್ನ ಮನಸ್ಸನ್ನು ಸಿದ್ಧಪಡಿಸಿಕೋ. ಇದು ನಿರ್ಧಾರದ ಸಮಯ! ನೀನು ಯಾವ ಮಾರ್ಗದಲ್ಲಿ ಹೋಗಬೇಕೋ ಅದನ್ನು ನಿರ್ಧರಿಸು!" ಎಂದು ಹೇಳಿದನು.

ಇದು ನಮ್ಮ ದಿನದ ಚೆನ್ನಾಗಿ ಬೆರೆತುಕೊಳ್ಳುವ ಧರ್ಮಕ್ಕೆ - ಚಿಕ್ಕ ಕ್ರೈಸ್ತತ್ವಕ್ಕೆ, ಚಿಕ್ಕ ಪೂರ್ವದ ಧರ್ಮಕ್ಕೆ, ಹೆಚ್ಚಿನ ಆಧ್ಯಾತ್ಮ ಯೋಗಕ್ಕೆ ಜನಪ್ರೀಯ ಧಾರ್ಮಿಕ ವಾತವರಣವಾಗುತ್ತದೆ. "ಸಿಂಕ್ರೆಸ್ಟಿಕ್ ಧರ್ಮಗಳು" ಎಂದು ಕರೆಯಲ್ಪಡುವವರು ಅನೇಕ ಜನರಿಗೆ ಒಂದು ಮನವಿಯನ್ನು ಮಾಡುತ್ತಾರೆ. ದೇವರು, ಹೇಗೂ, ಎಂದಿಗೂ "ಸಿಂಕ್ರೆಸ್ಟಿಕ್ ಧರ್ಮಗಳನ್ನು"[7] ಅಂಗೀಕರಿಸುವದಿಲ್ಲ. ಇಸ್ರಾಯೇಲರು ಯೆಹೋವನ ಆರಾಧನೆಯೊಂದಿಗೆ ಬಾಳನ ಆರಾಧನೆಯನ್ನು ಮಿಶ್ರ ಮಾಡಲು ಯತ್ನಿಸುತ್ತಿದ್ದರು. ದೇವರ ವಕ್ತಾರನು "ಇದು ಸಾಧ್ಯವೇ ಇಲ್ಲ! ನೀವು ಒಬ್ಬನ ಅಥವಾ ಮತ್ತೊಬ್ಬನ ಹತ್ತಿರ ಮಾತ್ರ ಹೋಗಬಹುದು! ಅದು ಯಾವ ಮಾರ್ಗವಾಗಿರಬೇಕು ಎಂಬುದನ್ನು ನಿಮ್ಮ ಮನಸ್ಸಿನಲ್ಲಿ ಮಾಡಿಕೊಳ್ಳಿರಿ!" ಎಂದು ಹೇಳುತ್ತಾನೆ.

ಕಲುಕುವಂತ ಸವಾಲಿಗೆ ಜನಸ್ತೋಮ ಏನೆಂದು ಪ್ರತಿಕ್ರಿಯಿಸಿತು? "ಜನರು ಏನೂ ಉತ್ತರಕೊಡದೇ ಸುಮ್ಮನಿರುವುದನ್ನು ನೋಡಿ" (ವಚನ 21ಬಿ). ಅಲ್ಲಿ ಉಪಸ್ಥಿತರಿದ್ದ ಅನೇಕರು ಎಲೀಯನ ಮಾತುಗಳು ಸರಿಯಾಗಿವೆ ಎಂದು ತಿಳಿದರು; ಯೆಹೋವನು ಮೂರ್ತಿಪೂಜೆಯ ರೀತಿಯಲ್ಲಿನ ಬಾಳನ ಆರಾಧನೆಯನ್ನು ಖಂಡಿಸುತ್ತಾನೆ ಎಂದು ಅವರು ಅರಿತಿದ್ದರು. ತಮ್ಮನ್ನು ಸಮರ್ಥಿಸಿಕೊಂಡು ಹೇಳಲು ಏನೂ ಇಲ್ಲ ಎಂದು ಅವರು ಅರಿತಿದ್ದರು. ಇನ್ನೊಂದೆಡೆಯಲ್ಲಿ ಅವರು ತಮ್ಮನ್ನು ತಾವು ಯೆಹೋವನಿಗೆ ಒಪ್ಪಿಸಲು ಮತ್ತು ಪರಿಣಾಮವನ್ನು ತೆಗೆದುಕೊಳ್ಳಲು ಅವರು ಸಿದ್ಧರಿರಲಿಲ್ಲ. ಅವರು ಎಣಿಸಲ್ಪಟ್ಟರು. ಒಂದು ಕಡೆ ಒಬ್ಬ ಮನುಷ್ಯ; ಇನ್ನೊಂದೆಡೆಯಲ್ಲಿ ಬಾಳನ 450 ಪ್ರವಾದಿಗಳು ಮತ್ತು ಅರಸ ಮತ್ತವನ ಸೇನೆ. ಹೀಗೆ ಅವರು ಏನನ್ನೂ ಹೇಳಲಿಲ್ಲ.

ಇದನ್ನು ನಾನು ಅನೇಕ ಸಾರಿ ನೋಡಿದ್ದೇನೆ, ಬಹುಶಃ ನೀವೂ ಕೂಡ ನೋಡಿರ ಬಹುದು. ನೀವು ಯಾರೊಬ್ಬರೊಡನೆ ಅಭ್ಯಸಿಸುತ್ತಿರುವಂತೆ, ಆತನು ಆ ಪರಿಚ್ಛೇದ ವನ್ನು ಆರಂಭದಿಂದಲೂ ನಿನ್ನೊಡನೆ ಚರ್ಚಿಸುತ್ತಾನೆ, ವಾದವನ್ನೂ ಮಾಡಬಹುದು. ಕಾಲಕ್ರಮೇಣದಲ್ಲಿ, ಆತನು ತಾನೇನು ಮಾಡಬೇಕೆಂಬುದು *ತಿಳಿಯುವ* ಆ ಸಮಯವು ಅಲ್ಲಿ ಬರುತ್ತದೆ, ಆತನು ಯಾವುದೇ ವಿರೋಧವನ್ನು ಮಾಡಿದ್ದಾಗ್ಯೂ ನೀವು ವೇದಭಾಗದ ಸಹಾಯದಿಂದ ಉತ್ತರಿಸುತ್ತೀರಿ ಎಂದು ತಿಳಿಯುತ್ತಾನೆ ಆತನು ಕಟ್ಟುಬೀಳುವವರೆಗೆ ಒಳಗಾಗಲು ಸಿದ್ಧನಾಗುವದಿಲ್ಲ, ಹೀಗೆ ಆತನು ಉತ್ತರಿಸಲು ನಿರಾಕರಿಸುತ್ತಾನೆ - ಮತ್ತು ನೀನು ಒಳಗೆ ಅಲ್ಪವಾಗಿ ಸಾಯುತ್ತಿ. ಇಸ್ರಾಯೇಲರೂ ಕೂಡಾ ಹಾಗೇ ಇದ್ದರು. "ಆ ಜನರು ಆತನ

ಮಾತಿಗೆ ಉತ್ತರ ಕೊಡದೆ ಸುಮ್ಮನಿದ್ದರು.''

ಎಲೀಯನು ಇಂಥ ಪರಿಸ್ಥಿತಿಗಳಲ್ಲಿ ನಮ್ಮಲ್ಲಿ ಅನೇಕರಿಗಿಂತ ಚುರುಕಾಗಿದ್ದನು. ಆತನು ತನ್ನ ಮನದಲ್ಲಿ ಒಂದು ಯೋಜನೆಯನ್ನು ಹೊಂದಿದ್ದನು:

> ಯೆಹೋವನ ಪ್ರವಾದಿಗಳಲ್ಲಿ ನಾನೊಬ್ಬನೇ ಉಳಿದಿದ್ದೇನೆ; ಬಾಳನ ಪ್ರವಾದಿಗಳಲ್ಲಿ ನಾನೂರೈವತ್ತು ಮಂದಿ ಇದ್ದಾರೆ. ಅವರು ಎರಡು ಹೋರಿಗಳನ್ನು ನಮ್ಮ ಬಳಿಯಲ್ಲಿ ತರಲಿ, ಅವುಗಳಲ್ಲೊಂದನ್ನು ಆರಿಸಿಕೊಂಡು ಕಡಿದು ತುಂಡು ಮಾಡಿ ಕಟ್ಟಿಗೆಯ ಮೇಲಿಡಲಿ; ಆದರೆ ಬೆಂಕಿಯನ್ನು ಹೊತ್ತಿಸಬಾರದು ನಾನೂ ಇನ್ನೊಂದನ್ನು ಹಾಗೆಯೇ ಮಾಡಿ ಬೆಂಕಿ ಹೊತ್ತಿಸದೆ ಕಟ್ಟಿಗೆಯ ಮೇಲಿಡುವೆನು ನೀವು ನಿಮ್ಮ ದೇವರ ಹೆಸರು ಹೇಳಿ ಪ್ರಾರ್ಥಿಸಿರಿ; ಆನಂತರ ನಾನು ಯೆಹೋವನ ಹೆಸರು ಹೇಳಿ ಪ್ರಾರ್ಥಿಸುವೆನು ಆ ಇಬ್ಬರಲ್ಲಿ ಯಾವನು ಲಾಲಿಸಿ ಬೆಂಕಿಯನ್ನು ಕಳುಹಿಸುವನೋ ಅವನೇ ದೇವರೆಂದು ನಿಶ್ಚಯಿಸೋಣ ಅಂದನು. ಎಲ್ಲಾ ಜನರೂ ಸರಿ, ನೀನು ಹೇಳಿದಂತೆಯೇ ಆಗಲಿ ಎಂದು ಉತ್ತರಕೊಟ್ಟರು (ವಚನಗಳು 22-24).

ಎಲೀಯನು ಇನ್ನೂ ಜನರೊಡನೆಯೇ ಮಾತನಾಡುತ್ತಿದ್ದಾನೆ, ಹೊರತು ಬಾಳನ ಪ್ರವಾದಿಗಳೊಂದಿಗಲ್ಲ. ದೇವರು ಎಲೀಯನನ್ನು ಮಳೆಯನ್ನು ಬರಿಸಲು ಕಳುಹಿಸಿದ್ದನು (ವಚನ 1), ಆದರೆ ಅಲ್ಲಿ ಪಶ್ಚಾತ್ತಾಪ ಇರದ ಹೊರತು ಅದು ಸಂಭವಿಸದು. ಹೀಗೆ ಎಲೀಯನು ಒಂದು ಸವಾಲನ್ನು ಮುಂದಿಡುತ್ತಾನೆ.

''ಯೆಹೋವನ ಪ್ರವಾದಿಗಳಲ್ಲಿ ನಾನೊಬ್ಬನೇ'' ಎಂದು ಆತನು ಆರಂಭಿಸುತ್ತಾನೆ. ನೂರಾರು ಜನ ಪ್ರವಾದಿಗಳು ಗವಿಗಳಲ್ಲಿ ಅಡಗಿಸಲ್ಪಟ್ಟಿದ್ದರು (ವಚನ 13) ಆದರೆ ಆ ಸಮಯದಲ್ಲಿ ಎಲೀಯನು ಪ್ರವಾದಿಗಳ ಕೆಲಸ ಮಾಡುವ ಒಬ್ಬನೇ ಒಬ್ಬನಾಗಿದ್ದನು. ಆತನು ತನ್ನ ಸವಾಲಿನ ಬಗೆಗೆ ವಿವರಣೆಯನ್ನು ಕೊಡಲು ಆರಂಭಿಸಿದನು. ''ಬಾಳನ ಪ್ರವಾದಿಗಳು ಎರಡು ಹೋರಿಗಳನ್ನು ತರಲಿ.'' ಈ ಸುಳ್ಳು ಪ್ರವಾದಿಗಳು ಅರಸನ ರಕ್ಷಣೆಯಲ್ಲಿ ಇರುವವರೆಗೂ ಅವರು ಹತ್ತಿರದಲ್ಲಿ ಹುಲ್ಲುಗಾವಲಿಗೆ ಹೋದರು ಮತ್ತು ಎತ್ತುಗಳ ಜೋಡಿಯೊಂದನ್ನು ತಂದರು. ಎತ್ತು ಬಾಳನ ಚಿಹ್ನೆಗಳಲ್ಲಿ ಒಂದಾಗಿತ್ತು. ''ನಂತರ ಅವರು ಆರಿಸಿಕೊಳ್ಳಲಿ'' ಎಂದು ಎಲೀಯನು ಮುಂದುವರೆಸಿದನು. ಮೇಲ್ಮುಖವಾಗಿ ಈ ಸವಾಲಿನ ಎಲ್ಲಾ ಅವಕಾಶಗಳು ಬಾಳನಿಗೇ ಆಗಿದ್ದವು. ''ಅವರು ತಮ್ಮ ಹೋರಿಯನ್ನು ಕಡಿದು ತುಂಡು ಮಾಡಿ ಕಟ್ಟಿಗೆಯ ಮೇಲಿಡಲಿ; ಆದರೆ ಬೆಂಕಿಯನ್ನು ಹೊತ್ತಿಸಬಾರದು. ನಾನೂ ಇನ್ನೊಂದನ್ನು ಹಾಗೇ ಮಾಡಿ ಬೆಂಕಿ ಹೊತ್ತಿಸದೇ ಕಟ್ಟಿಗೆಯ ಮೇಲಿಡುವೆನು'' ಎಂದು ಹೇಳಿದನು. ಎಲೀಯನು ನಂತರದಲ್ಲಿ ಹೀಗೆ ಸೂಚನೆಗಳನ್ನು ಕೊಟ್ಟನು. ಯಾವಾಗಲೂ ಬಲಿಯನ್ನು ಅರ್ಪಿಸುವಾಗ ಅದರ ಕೆಳಗೆ ಬೆಂಕಿಯನ್ನು ಹೊತ್ತಿಸುವದು ಸರ್ವೆಸಾಮಾನ್ಯ. ನಂತರ ಎಲೀಯನ ತೀರ್ಮಾನವು ಬಂದಿತು. ''ನೀವು ನಿಮ್ಮ ದೇವರ ಹೆಸರು ಹೇಳಿ ಪ್ರಾರ್ಥಿಸಿರಿ; ಅನಂತರ ನಾನು ಯೆಹೋವನ ಹೆಸರು ಹೇಳಿ ಪ್ರಾರ್ಥಿಸುವೆನು ಇಬ್ಬರಲ್ಲಿ ಯಾವನು ಲಾಲಿಸಿ ಬೆಂಕಿಯನ್ನು ಕಳುಹಿಸುವನೋ ಅವನೇ ದೇವರೆಂದು ನಿಶ್ಚಯಿಸೋಣ.''

ಎಲೀಯನ ಮೊದಲ ಸವಾಲು ವರ್ಷಗಳವರೆಗೆ ಮಳೆಬಾರದಿರುವ ಹಾಗೆ ಆಗಿತ್ತು - ಬಾಳನೆಡೆಗೆ ಕೈ ತೋರಿಸುವುದೇ ಆಗಿತ್ತು ಹಾಗೆಯೇ ಇದು ಕೂಡಾ. ಬಾಳನು ನಿಸರ್ಗದ *ದೇವರಾಗಿದ್ದನು.* ಗುಡುಗು ಗುಡಿಗಿದಾಗ, ಅದು ಬಾಳನು ಮಾತನಾಡಿದಂತಾಗುತ್ತದೆ. ಮುಂದೆ, ಬಾಳನ ಪುಜಾರಿಗಳು ಸೂರ್ಯನು ಬಾಳನ ಕಿರೀಟ ಎಂದು ನಂಬುತ್ತಿದ್ದರು. ಅವರು ಸೂರ್ಯನನ್ನು ನೋಡುವಾಗ, ಅವರು ಬಾಳನನ್ನು ಸ್ತುತಿಸುತ್ತಿದ್ದರು. ಬಾಳನು ನಿಜವಾಗಿಯೂ ನಿಸರ್ಗದ ದೇವರಾಗಿದ್ದರೆ, ಆಕಾಶದಿಂದ ಬೆಂಕಿಯನ್ನು ಕಳುಹಿಸುವದು ಆತನಿಗೆ

ಮಕ್ಕಳಾಟಿಕೆಯಂತೆ.

ಎಲೀಯನ ಸವಾಲು ಇಸ್ರಾಯೇಲ್ಯರನ್ನು ಸೆರೆ ಹಿಡಿಯಿತು. ಬಹುಶಃ ಕೆಲವರು ಮೋಶೆಯು ಗುಡಾರಗಳನ್ನು ಸಿದ್ಧಪಡಿಸಿದಾಗ ಯೆಹೋವ ದೇವರು (ಯಾಜಕಕಾಂಡ 9:24) ಮತ್ತು ಸಲೊಮೋನನು ದೇವಾಲಯವನ್ನು ಪ್ರತಿಷ್ಟಿಸಲು ಬೆಂಕಿಯನ್ನು ಕೆಳಗೆ ಕಳುಹಿಸಿದ್ದನ್ನು ನೆನೆಪಿಸಿಕೊಂಡರು (2 ಪೂರ್ವಕಾಲ ವೃತ್ತಾಂತ 7:1). ಇದು "ದೇವರ ಯುದ್ಧವಾಗಿದೆ" "ಎಲ್ಲಾ ಜನರು, ಸರಿ ನೀನು ಹೇಳಿದಂತೆಯೇ ಆಗಲಿ ಎಂದು ಉತ್ತರಕೊಟ್ಟರು"[8] (ವಚನ 24ಬಿ).

## ದೈವಶಾಸ್ತ್ರೀಯ ಸಂಧಿಸುವಿಕೆ (18:25-29)

ಮೊದಲ ಸಾರಿ ಎಲೀಯನು ಬಾಳನ ಪೂಜಾರಿಗಳ ಜೊತೆಯಲ್ಲಿ ಮಾತನಾಡಿದನು: "ನೀವೇ ಒಂದು ಹೋರಿಯನ್ನು ಆರಿಸಿಕೊಂಡು ಅದನ್ನು ಸಿದ್ಧಪಡಿಸಿ ನಿಮ್ಮ ದೇವರ ಹೆಸರನ್ನು ಹೇಳಿ ಪ್ರಾರ್ಥಿಸಿರಿ" ಎಂದನು (ವಚನ 25).

ಎಲೀಯನು ಮೊದಲು ಜನರೊಡನೆ ಮಾತನಾಡಿದನು, ಯಾಕೆಂದರೆ ಆತನು ಅವರ ಬಗೆಗೆ ಕಾಳಜಿಯುಳ್ಳವನಾಗಿದ್ದನು; ಹಾಗೂ ಮಾಡುವುದರಲ್ಲಿಯೂ ಆತನು ಬಾಳನ ಪ್ರವಾದಿಗಳನ್ನು ಸಿಕ್ಕಿಸಿದ್ದನು. ಆ ಪ್ರಾಸ್ತಾವನೆಯು ಯೋಗ್ಯವೆನಿಸಿದೆಯೋ ಅಥವಾ ಅದನ್ನು ಮಾಡಲು ಅವರು ಸಿದ್ಧರಿದ್ದಾರೋ ಎಂದು ಎಲೀಯನು ಅವರಿಗೆ ಕೇಳಲಿಲ್ಲ. ಅವರು ಅದನ್ನು ಮಾಡಲೇಬೇಕು ಅಥವಾ ಜನರೆದೆರು ತಮ್ಮ ದೇಶದ ಸೋಲನ್ನು ಒಪ್ಪಿಕೊಳ್ಳಲೇಬೇಕು; ಎಲೀಯನು ಅವರಿಗೆ *ಆಜ್ಞಾಪಿಸಿದನು.*

ನಾವು ಆ ದುಃಖದ ದೃಶ್ಯ ಮತ್ತು ನಿಶಕ್ತವಾದ ಧರ್ಮದ ಆವೇಶದ ಅಬ್ಬರಗಳನ್ನು ಈಗ ನಾವು ನೋಡಲಿದ್ದೇವೆ.

ಧಾರ್ಮಿಕ ಕ್ಷೇತ್ರದಲ್ಲಿನ, ಉತ್ಸಾಹ ಮತ್ತು ಪೌರುಷದ ಜೊತೆಗಿನ ಆತ್ಮಿಕ ಪ್ರದರ್ಶನಗಳಿಂದ ಮಾನವರಾದ ನಾವು ಆಕರ್ಷಿತರಾಗುತ್ತೇವೆ. ನಾವು "ಖಂಡಿತವಾಗಿ ಆ ಗುಂಪು ಅಥವಾ ಅದು ಸರಿಯಾಗಿದೆ. ಅವರು ಮಾಡುವುದೆಲ್ಲವನ್ನೂ ನೋಡಿರಿ. ಎಷ್ಟು ದೊಡ್ಡವರಾಗಿದ್ದಾರೆ ನೋಡಿರಿ. ಅವರು ಎಷ್ಟು *ಕ್ರಿಯಾಶಾಲಿಗಳಾಗಿದ್ದಾರೆ!*" ಎನ್ನುತ್ತೇವೆ. ನೀವು ಅವರ ಕ್ರಿಯಾ ಶೀಲತೆಯನ್ನು ಐದು, ಆರು, ಏಳು ತಾಸುಗಳ ಕೂತುಕೊಳ್ಳದೇ ಹೋದರೆ ನೀವು ಬಾಳಪ್ರವಾದಿಗಳ ಕಾರ್ಯವನ್ನು ನೀವು ಕಾಣುವುದಿಲ್ಲ!

> ಅವರು ತರಲ್ಪಟ್ಟ ಹೋರಿಗಳಲ್ಲೊಂದನ್ನು ತೆಗೆದು ಕೊಂಡು ಸಿದ್ಧಪಡಿಸಿ ತಮ್ಮ ದೇವರಾದ ಬಾಳನ ಹೆಸರು ಹೇಳಿ - ಬಾಳನೇ ನಮಗೆ ಕಿವಿಗೊಡು ಎಂದು ಹೊತ್ತಾರೆಯಿಂದ ಮಧ್ಯಾಹ್ನದವರೆಗೆ ಕೂಗಿದರೂ ಆಕಾಶವಾಣಿಯಾಗಲಿಲ್ಲ; ಅವರು ವೇದಿಯ ಸುತ್ತಲೂ ಕುಣಿದಾಡಿದರೂ ಯಾರೂ ಉತ್ತರ ದಯಪಾಲಿಸಲಿಲ್ಲ (ವಚನ 26).[9]

ಪ್ರಾಪಂಚಿಕವಾದ ದಾಖಲೆಯಿಂದ,[10] ನಾವು ಬಾಳನ ಪ್ರವಾದಿಗಳು ಏನು ಮಾಡಿದರು ಎಂಬ ಯೋಗ್ಯವಾದ ಸರಿಯಾದ ಚಿತ್ರವನ್ನು ಪುನರ್‌ನಿರ್ಮಿಸಬಹುದು. ಅವರು ಜೋರಾಗಿ, "ಓ ಬಾಳನೇ ಕೇಳು" ಅರಚುವ ಮೂಲಕ ಪ್ರಾರಂಭಿಸಿದರು, ನಂತರ ಓಲಾಡುತ್ತಾ ಕುಣಿಯಲು ಪ್ರಾರಂಭಿಸಿದರು. ಅವರು ಜೋರಾಗಿ, "ಓ ಬಾಳನೇ, ನಮ್ಮನ್ನು ಕೇಳು" ಎಂದು ಕೂಗಿದರು. ಅವರು ಸುತ್ತಲೂ ಸುತ್ತಲೂ ತಿರುಗಿದರು. ಹಿಂದೆ ಮುಂದೆ ಉನ್ಮತ್ತರಂತೆ ವೇದಿಕೆಯವರೆಗೆ ಮತ್ತು ಹೊರಗೆ ತಿರುಗಾಡಿದರು. ಅವರ ತಲೆಗಳು ತಗ್ಗಿಸಲ್ಪಟ್ಟವು ಕತ್ತರಿಸದ ಅವರ ಕೂದಲುಗಳು ನೆಲವನ್ನು ಗುಡಿಸತೊಡಗಿದವು. "ಓ ಬಾಳನೇ ಸಹಾಯಿಸು!" ಎಂದು ಮನೋವೈಕಲ್ಪದವರಂತೆ ಅವರು ಚೀರಿದರು. ಇದು ತಾಸುಗಳವರೆಗೆ, ಮುಂಜಾನೆಯಿಂದ ಮಧ್ಯಾಹ್ನದವರೆಗೆ ಹೋಯಿತು.

ಆ ವಿಷಯದಲ್ಲಿ ಹುಚ್ಚುತನವು ಸಾಂಕ್ರಾಮಿಕದಂತೆ ಬಂತು, ಮತ್ತು ಜನರು ಅದರ ಜೊತೆ ಸೇರಿಕೊಂಡರು. ಎಲೀಯನು ಅದನ್ನು ಭಗ್ನಗೊಳಿಸಿದನು "ಮಧ್ಯಾಹ್ನವಾದ ನಂತರ ಎಲೀಯನು ಅವರನ್ನು ಪರಿಹಾಸ್ಯ ಮಾಡಿ - ಗಟ್ಟಿಯಾಗಿ ಕೂಗಿರಿ! ಅವನು ದೇವರಾಗಿರುತ್ತಾನಲ್ಲಾ! ಈಗ ಒಂದು ವೇಳೆ ಅವನು ಧ್ಯಾನದಲ್ಲಿರಬಹುದು; ಇಲ್ಲವೇ ಯಾವುದೇ ಕೆಲಸದಲ್ಲಿ ಅಥವಾ ಪ್ರಯಾಣದಲ್ಲಿ ಇರಬೇಕು. ಅದೂ ಇಲ್ಲದಿದ್ದರೆ ನಿದ್ರೆ ಮಾಡುತ್ತಿದ್ದಾನು, ಎಚ್ಚರವಾಗಬೇಕು" (ವಚನ 27).

ಇದೊಂದು ಮೋಜಿನ ವಚನವಾಗಿದೆ; ಎಲೀಯನು ಕೆಲ ನಗೆಯುಕ್ಕಿಸುವ ಸಂಗತಿಗಳನ್ನು ಹೇಳಿದನು. ಅವುಗಳನ್ನು ಹೇಳುವ ಅಧಿಕಾರವಾಗಿತ್ತು. ಮೂರ್ತಿ ಪೂಜಾರಕರು ತಮ್ಮ ವಿಗ್ರಹದ ದೇವರು ತಮ್ಮನ್ನು ತಾವೇ ದೊಡ್ಡದಾಗಿಸಿಕೊಂಡಿವೆ ಹಾಗೆಯೇ ಅವರ ಮಾನವನ ಗುಣಗಳ ಭವಿಷ್ಯದ ಅಂದಾಜಾಗಿವೆ ಎಂದು ಯೋಚಿಸಿದ್ದರು. ಅವರ ದೇವರು ಮಾನವನ ಹಸಿವೆಯನ್ನೂ ಮತ್ತು ಯಾವಾಗಲೂ ಮಾನವ ದೈಹಿಕ ಕಾರ್ಯಗಳನ್ನು ಹೊಂದಿರುವಂತೆಯೇ ಚಿತ್ರಿಸಲಾಗಿರುತ್ತದೆ.

ಇವುಗಳ ಹಾಸ್ಯಾಸ್ಪದ ಸಂಗತಿಗಳನ್ನು ಹೇಳುವಲ್ಲಿ ಎಲೀಯನಿಗೆ ಭಯಂಕರವಾದ ಮತ್ತು ಗಂಭೀರವಾದ ಉದ್ದೇಶವಿತ್ತು. ಆತನ ಉದ್ದೇಶವು ತಣ್ಣೀರನ್ನು ತಲೆಯ ಮೇಲೆ ಸುರಿದುಕೊಳ್ಳುವಂತಹ ರೂಪಕಾರ್ಥದಂತೆ ಇಸ್ರಾಯೇಲ್ಯರು ಅವರಿಗೆ ಹಿಡಿದುಕೊಂಡಿರುವ ಹುಚ್ಚುತನದಿಂದ ಹೊರಗೆ ಬರಲೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದನು. ಇದಕ್ಕನುಗುಣವಾಗಿ, ಆತನು ಜನರಿಗೆ "ಇದು ಹಾಸ್ಯಸ್ಪದವಾದುದಲ್ಲವೇ?" ಎಂದು ಹೇಳುತ್ತಾನೆ.

ಆತನು "ಗಟ್ಟಿಯಾಗಿ ಕೂಗಿರಿ! ನೀವು ಸರಿಯಾಗಿದ್ದುದಾಗಿದ್ದರೆ ಅವನು ದೇವರಾ ಗಿರುತ್ತಾನಲ್ಲಾ, ಅವನು ದೇವರಾಗಿರುತ್ತಾನಲ್ಲಾ, ಅವನ ಹತ್ತಿರ ಸಮಸ್ಯೆಗಳು ಇರಲಾರವು; ಸಮಸ್ಯೆಯು ನಿಮ್ಮಲ್ಲಿಯೇ ಇದೆ. ನಿಮ್ಮ ಕೂಗು ಜೋರಾಗಿಲ್ಲ. ಆತನ ಲಕ್ಷವನ್ನು ನಿಮ್ಮತ್ತ ಸೆಳೆಯಿರಿ" ಎಂದು ಅಣಕಿಸಿದನು.

"ಬಹುಶಃ ಆತನು ಕೆಲಸದಲ್ಲಿರಬಹುದು." ಇದಕ್ಕೆ ನೀವು *ಮಗ್ನನಾಗಿರುವನು* ಎಂಬ ಪದವನ್ನು ಬಳಸಿದರೆ ನಿಮಗೆ ಸರಿಯಾಗಿ ತಿಳಿಯುತ್ತದೆ. ಒಬ್ಬನು ಟಿ. ವಿಯಲ್ಲಿ ಫುಟ್‌ಬಾಲ್ ಆಟವನ್ನು ವೀಕ್ಷಿಸುತ್ತಿದ್ದಾನೆ ಮತ್ತು ಆತನ ಹೆಂಡತಿ ಅವನ ಲಕ್ಷವನ್ನು ತನ್ನೆಡೆ ಸೆಳೆಯಲು ಪ್ರಯತ್ನಿಸುತ್ತಿದ್ದಾಳೆ ಎಂದು ಯೋಚಿಸಿರಿ. "ಬಹುಶಃ ಬಾಳನು ಸುಪರ್ ಬಾಲನ್ನು ನೋಡುತ್ತಿರಬಹುದು."

"ಆತನು ಹೊರಗೆ ಹೋಗಿರಬಹುದು" ಇಬ್ರಿಯ ಭಾಷಾಂತರವು "ಹೊರಗೆ ಹೋಗಿ ದ್ದಾನೆ" ಇದು ಬೈಬಲ್ಲಿನ ಸಮಯದಲ್ಲಿ "ಬಚ್ಚಲು ಕೋಣೆಗೆ ಹೋಗುವದು" ಎಂಬುದಕ್ಕೆ ಸೌಮ್ಯಾಕ್ತಿಯಾಗಿದೆ; ಮತ್ತು ಬಲು ಮುಂಚೆಯೇ ವಿಮರ್ಷಕರು ಇದೇ ಎಲೀಯನು ಅರ್ಥೈಸಿದ್ದು ಎಂದು ಅರಿತುಕೊಂಡಿದ್ದಾರೆ. ಬಹುಶಃ ಇದು ವ್ಯವಹಾರವನ್ನು ಗಮನಿಸುವದು, ಆಹಾರವನ್ನು ಹುಡುಕುವಂತವುಗಳನ್ನು ಸುಚಿಸುವುದಾಗಿರಬಹುದು. ಸೂಕ್ಷ್ಮವಾಗಿ, ಎಲೀಯನು ಸೂಚಿಸಿದ್ದನ್ನು ನಾವು ಹೀಗೆ ಹೇಳಬಹುದು "ಬಹುಶಃ ಬಾಳನು ಆಹಾರವನ್ನು ಪಡೆಯಲು ಸುರಕ್ಷಿತ ಮಾರ್ಗದಲ್ಲಿ ಹೋಗಿರಬಹುದು."

"ಆತನು ಬಹುಶಃ ಪ್ರಯಾಣದಲ್ಲಿರಬಹುದು" ಬಹುಶಃ ಆತನು ಚಳಿಯನ್ನು ತಡೆದುಕೊಳ್ಳಲು ಬೆಚ್ಚನೆಯ ಹವಾಮಾನಕ್ಕಾಗಿ ಆತನು ಹೋಗಿರಬಹುದು. ಬಹುಶಃ ನಿದ್ರಿಸುತ್ತಿದ್ದಾನೆ ಮತ್ತು ಆತನನ್ನು ಎಚ್ಚರಿಸುವದು ಅವಶ್ಯವಿದೆ. ಆತನು ಬಹುಶಃ ಹೆಚ್ಚಿನ ನಿದ್ರೆ ಗುಳಿಗೆಯನ್ನು ತೆಗೆದುಕೊಂಡಿರಬಹುದು!

ಎಲೀಯನ ಅಣುಕಿಸುವಿಕೆಯು ಎರಡು ಕಾರಣಗಳನ್ನು ಹೊಂದಿತ್ತು: ಇದು

ಪ್ರತ್ಯಕ್ಷವಾಗಿ ಇಸ್ರಾಯೇಲ್ಯರು ಕ್ರೋಧದಿಂದ ಹಿಡಿಯಲ್ಪಡುವ ಇಚ್ಛೆಯ ಪರಿಣಾಮವನ್ನು ಇದು ಹೊಂದಿತ್ತು, ಮತ್ತು ಇದು ಬಾಳನ ಪ್ರವಾದಿಗಳನ್ನು ಕ್ರೋಧಿತರನ್ನಾಗಿಸಿತು. ಅವರು ಗಟ್ಟಿಯಾಗಿ ಕೂಗಿ ತಮ್ಮ ಪದ್ಧತಿಯ ಪ್ರಕಾರ ಈಟಿ ಕತ್ತಿಗಳಿಂದ ರಕ್ತಸೋರುವಷ್ಟು ಗಾಯಮಾಡಿಕೊಂಡರು. ಮಧ್ಯಾಹ್ನದಿಂದ ನೈವೇದ್ಯ ಸಮರ್ಪಣೆಯ ಹೊತ್ತಿನವರೆಗೂ ಪರವಶರಾಗಿ ಕೂಗುತ್ತಾ ಇದ್ದರು. ಆದರೂ ಆಕಾಶವಾಣಿಯಾಗಲಿಲ್ಲ; ಯಾವನೂ ಅವರಿಗೆ ಉತ್ತರಕೊಡಲಿಲ್ಲ, ಅವರನ್ನು ಲಕ್ಷಿಸಲಿಲ್ಲ (ವಚನಗಳು 28, 29ಎ).

ಬಾಳನ ಸುಳ್ಳು ಪ್ರವಾದಿಗಳು ತಮ್ಮನ್ನು ತಾವೇ ಬಾಳನ ಸಂಸ್ಕಾರದ ಎರಡನೆಯ ಮತ್ತು ಮೂರನೆಯ ಹಂತದಲ್ಲಿ ಕಾಲಿಟ್ಟರು. ಅವರ ಕೂಗುವಿಕೆಯು ದೆವ್ವ ಹಿಡಿದವರಂತೆ ಗಟ್ಟಿಯಾಗಿ ಕೂಗುವ ಚಿತ್ಕಾರವು ಆಗಿತ್ತು. ಅವರು ತಮ್ಮ ದೇಹವನ್ನು ಚೂಪಾದ ಆಯುಧಗಳಿಂದ ಇರಿದುಕೊಂಡರು, ಮತ್ತು ಅವರ ರಕ್ತವು ಬೆವರಿನೊಡನೆ ಸೇರಿಕೊಂಡು ಅವರ ದೇಹದ ಮೇಲೆ ಹರಿಯತೊಡಗಿತು. ಒಂದು ವೇಳೆ ನೀನು ಅಲ್ಲಿ ಹತ್ತಿರದಲ್ಲೇ ನಿಂತಿದ್ದಾದರೆ ಅವರು ಬೇಗಬೇಗನೇ ಉರುಳುತ್ತಿರುವಂತೆ ನೀನೂ ಸಹ ರಕ್ತಸಿಕ್ತನಾಗಬಹುದು.

ಅವರು "ಪ್ರವಾದನೆಗಳನ್ನು" ಪ್ರಾರಂಭಿಸಿದರು (NASB ಯಲ್ಲಿ ಆವೇಶದಿಂದ ಮಾತನಾಡು ಎಂದಿದೆ, ಇಬ್ರಿಯ ಪದವು "ಪ್ರವಾದನೆಗಳು" ಎಂಬುದಕ್ಕೆ ಸರಿಸಮಾನ ವಾದುದ್ದು ಆಗಿದೆ). ಅವರು ಮಾಡಿದ್ದನ್ನು ನೀನು ನೋಡಬಯಸಿದ್ದೇ ಆದರೆ ಟಿ. ವಿಯಲ್ಲಿ ಭಾವೋತ್ಕರ್ಷ (ಕೆರೆಸ್ಮಾಟಿಕ್) ಕಾರ್ಯಕ್ರಮಗಳನ್ನು ವೀಕ್ಷಿಸಿರಿ. ಅವರು ಅಸಂಬದ್ಧವಾಗಿ "ಭಾವೋತ್ಕರ್ಷದ ಹೇಳಿಕೆಗಳು" ಎಂದು ಕರೆಯಲ್ಪಡುವ ಅನರ್ಥಕವಾದ ಪದಗಳನ್ನು ಮಾತನಾಡಲು ಪ್ರಾರಂಭಿಸುತ್ತಾರೆ. ಇದು ಅರಾಜಕ್ಕೆ ಮತ್ತು ಚಿತ್ತವಿಕಾರಗಳ ದೃಷ್ಯವಾಗಿದೆ.

ಕೊನೆಯಲ್ಲಿ ಅವರು ನೆಲದ ಮೇಲೆ ಬಿದ್ದರು, ಅಲ್ಲಿ ಕೂಡಿಬಂದಿದ್ದ 450 ಬಳಲಿದ ಪ್ರವಾದಿಗಳು, ಅವರ ಸುಂದರವಾದ ನಿಲುವಂಗಿಗಳು ರಕ್ತ ಮತ್ತು ಬೆವರಿನಿಂದ ಮತ್ತು ಧೂಳಿನ ಜೊತೆ ಮುಚ್ಚಿಹಾಕಿತ್ತು, ಇದು ಆರು ಅಥವಾ ಏಳು ತಾಸಿನ ಹುಚ್ಚುತನವಿದ್ದು. (ಅವರ ಬಗೆಗೆ ಒಂದು ಸಂಗತಿಯನ್ನು ಹೀಗೆ ಹೇಳಬಹುದು: ಇದೆಲ್ಲವನ್ನೂ ಮಾಡಲು ಅವರು ಒಳ್ಳೇಯ ದೈಹಿಕ ಶಕ್ತಿಯನ್ನು ಹೊಂದಿದ್ದರು!)

ಆಗ ನಾವು ಈ ದುಃಖದಾಯಕವಾದ ವಿಮರ್ಷೆಯು ನಮ್ಮ ಮುಂದಿದೆ "ಆದರೂ ಆಕಾಶವಾಣಿಯಾಗಲಿಲ್ಲ; ಯಾವನೂ ಅವರಿಗೆ ಉತ್ತರಕೊಡಲಿಲ್ಲ, ಅವರನ್ನು ಲಕ್ಷಿಸಲಿಲ್ಲ" (ವಚನ 29ಬಿ).

ಪ್ರಾಮಾಣಿಕತೆಯ ಕುರಿತಾಗಿ ಈ ಪದವನ್ನು ನಾವು ಗಮನಿಸೋಣ. ಧಾರ್ಮಿಕವಾಗಿ ಪ್ರಾಮಾಣಿಕತೆಯು ಬಲು ಮಹತ್ವವಾದದ್ದು ಎಂಬುದು ಸಾಮಾನ್ಯ ತತ್ವಶಾಸ್ತ್ರವಾಗಿದೆ, ಒಬ್ಬನು ಪ್ರಾಮಾಣಿಕನಾಗಿರುವವರೆಗೂ ಆತನು ಏನನ್ನು ನಂಬುತ್ತಾನೆ ಅಥವಾ ಆತನು ಧಾರ್ಮಿಕ ವಾಗಿ ಏನು ಮಾಡಿದ್ದಾನೆ ಎಂಬುದರ ಮಧ್ಯ ಅಲ್ಪ ವ್ಯತ್ಯಾಸವನ್ನು ತರುತ್ತದೆ. ಧೂಳಿನಲ್ಲಿನ ಬಾಳನ ಪ್ರವಾದಿಗಳನ್ನು ನೋಡಿರಿ. ಇಲ್ಲಿ. ನೀವು ಪ್ರಾಮಾಣಿಕತೆಯ ಮೂರ್ತಿಕರಣವನ್ನು ನೋಡಬಹುದು. ಕೇವಲ ಪ್ರಾಮಾಣಿಕ ವಾಗಿ ಇದ್ದರೆ ಸಾಲದು ಆದರೆ ಬೈಬಲಿನ ಪ್ರಕಾರ ಯಾವುದು ಸರಿಯೋ ಅದಕ್ಕೆ ನಾವು ಬದ್ಧರಾಗಿರಬೇಕು.

## ನಿರ್ಣಾಯಕ ಎದುರಿಸುವಿಕೆ (18:30-35)

ಈಗ ಎಲೀಯನ ಸರದಿ. "ನಂತರ ಎಲೀಯನು ಎಲ್ಲಾ ಜನರನ್ನು ಹತ್ತಿರಕ್ಕೆ ಕರೆಯಲು ಅವರು ಬಂದರು" (ವಚನ 30ಎ). ಕೆಲ ಜನರು ಹಿಂದಿನ ಆರು ಏಳು ತಿಂಗಳಲ್ಲಿ ಹರಡಿ ಹೋಗಿದ್ದರು ಎಲೀಯನು ಅವರನ್ನು ತಿರುಗಿ ಜೊತೆಯಾಗಿ ಕೂಡಿಸಿದನು.

"ಅವನು ಹಾಳಾಗಿದ್ದ ಅಲ್ಲಿನ ಯೆಹೋವನ ವೇದಿಯನ್ನು ತಿರುಗಿ ಕಟ್ಟಿಸಿದನು" (ವಚನ

30ಬಿ). ಅವರು ಕರ್ತನ ವೇದಿಕೆಯನ್ನು ಕೆಡವಿಹಾಕಿದ್ದರು. ಮತ್ತು ಬಾಳ ಅಶೇರ್ಯರಿಗೆ ವೇದಿಕೆಯನ್ನು ಕಟ್ಟಿದ್ದರು. ಈಗ ಎಲೀಯನು ಕರ್ತನ ವೇದಿಕೆಯನ್ನು ಪುನಃ ಕಟ್ಟಿದನು. ತಿರುಗಿ ಎಲೀಯನು ಪುನರ್ ನಿರ್ಮಾಣದ ಕೆಲಸದಲ್ಲಿ ತೊಡಗಿದನು. ಆತನು ಯಾವದೇ ಹೊಸ ನಿಯಮವನ್ನು ತರಲಿಲ್ಲ; ಬದಲಾಗಿ ಹಳೆಯದನ್ನೇ ಎತ್ತಿ ಕಟ್ಟಿದನು "ಮತ್ತು ಎಲೀಯನು ಯೆಹೋವನಿಂದ ಇಸ್ರಾಯೇಲನೆಂಬ ಹೆಸರು ಹೊಂದಿದ ಯಾಕೋಬನ ಮಕ್ಕಳಿಂದ ಉತ್ಪತ್ತಿಯಾದ ಕುಲಗಳ ಸಂಖ್ಯೆಗೆ ಸರಿಯಾಗಿ ಹನ್ನೆರಡು ಕಲ್ಲುಗಳನ್ನು ತೆಗೆದುಕೊಂಡು" (ವಚನ 31).

ಎಲೀಯನು ಇಸ್ರಾಯೇಲರ ಹತ್ತು ಕುಲಗಳನ್ನು ಪ್ರತಿನಿಧಿಸುವ ಹತ್ತು ಕಲ್ಲುಗಳನ್ನು ಉಪಯೋಗಿಸಲಿಲ್ಲ. ಬದಲಾಗಿ ಆತನು *ಹನ್ನೆರಡು* ಕುಲಗಳನ್ನು ಪ್ರತಿನಿಧಿಸುವ ಹನ್ನೆರಡು ಕಲ್ಲುಗಳನ್ನು ಬಳಸಿದನು. ಜನರು ವಿಭಾಗವಾಗಿದ್ದರು ಆದರೆ ದೇವರು ಒಬ್ಬನೇ ಆಗಿದ್ದನು. ದೇವರ ಮಾರ್ಗದರ್ಶನದಿಂದ ಎಲೀಯನು ಎಲ್ಲಾ ಹನ್ನೆರಡು ಕುಲಗಳು ಇಸ್ರಾಯೇಲು ಎಂದು ಗುರಿತಿಸಲ್ಪಡುವ ಸಮಯದಲ್ಲಿ ಎಲೀಯನು ಮರಳಿದ್ದನು ಎಂಬುದರಲ್ಲಿ ಸಂಶಯವಿಲ್ಲ.

> ಯೆಹೋವನ ಹೆಸರಿಗೋಸ್ಕರ ಒಂದು ವೇದಿಯನ್ನು ಕಟ್ಟಿಸಿ ಅದರ ಸುತ್ತಲೂ ಬೀಜವರೀ ನೆಲವನ್ನು ಆಗಿಸಿ ಕಾಲಿವೆ ಮಾಡಿಸಿದನು. ಇದಲ್ಲದೆ ಕಟ್ಟಿಗೆಯನ್ನು ವೇದಿಯ ಮೇಲೆ ಕ್ರಮಪಡಿಸಿ ಹೋರಿಯನ್ನು ವಧಿಸಿ ತುಂಡುಮಾಡಿ ಅದರ ಮೇಲಿಟ್ಟನು. ಅನಂತರ ಜನರಿಗೆ - ನಾಲ್ಕುಕೊಡ ನೀರು ತಂದು ಯಜ್ಞ ಮಾಂಸದ ಮೇಲೆಯೂ ಕಟ್ಟಿಗೆಯ ಮೇಲೆಯೂ ಹೊಯ್ಯಿರಿ ಎಂದು ಆಜ್ಞಾಪಿಸಿದನು. ಅವರು ತೆಗೆದುಕೊಂಡು ಬರಲು ಇನ್ನೊಂದು ಸಾರಿ ತನ್ನಿರಿ ಎಂದು ಹೇಳಿದನು. ತಿರಿಗಿ ತಂದರು. ಅವನು ಮೂರನೆಯ ಸಾರಿ ಅದೇ ಪ್ರಕಾರವಾಗಿ ಆಜ್ಞಾಪಿಸಲು ಅವರು ಮತ್ತೊಮ್ಮೆ ತಂದು ಸುರಿದರು. ನೀರು ವೇದಿಯ ಸುತ್ತಲೂ ಹರಿಯಿತು; ಇದಲ್ಲದೆ ಅವನು ಕಾಲಿವೆಯನ್ನು ನೀರಿನಿಂದ ತುಂಬಿಸಿದನು (ವಚನಗಳು 32-35).

"ಬೀಜವರೀ ನೆಲ" ಎಷ್ಟು ದೊಡ್ಡದು ಎಂಬುದು ನನಗೆ ಖಚಿತವಾಗಿ ತಿಳಿದಿಲ್ಲ, ಆದರೆ ಪ್ರತ್ಯಕ್ಷವಾಗಿ ಒಂದು ಮೊತ್ತದ ಗಾತ್ರವಾಗಿದೆ. ಅಲ್ಲಿನ ನೀರಿನ ಕೊಡಗಳು ಎಷ್ಟು ದೊಡ್ಡವಿದ್ದವು ಎಂಬುದು ನನಗೆ ಖಚಿತವಾಗಿಲ್ಲ, ಆದರೆ ಒಂದು ಸಂಗತಿಯು ನನಗೆ ತಿಳಿದಿದೆ: ಹನ್ನೆರಡು ಕೊಡ ನೀರನ್ನು ವೇದಿಕೆಗೆ ಸುರಿಯಲಾಯಿತು ಎಂದು ಅದು *ವದ್ದೆಯಾಯಿತು.*

ವಿಮರ್ಷಕರು "ಅಲ್ಲಿ ಬರವು ಮೂರುವರೆ ವರ್ಷಗಳಿಂದ ಇದ್ದಿತು, ಆದರೂ ಇಷ್ಟೊಂದು ನೀರು ಅವರಿಗೆ ಹೇಗೆ ಸಿಕ್ಕಿತು" ಎಂದು ಹಾಸ್ಯ ಮಾಡುತ್ತಾರೆ! ಹೇಗೋ ಅಸಂಖ್ಯಾತ ಹಳ್ಳಗಳಿಂದ ಕೂಡಿದ ಕಿಷೋನ ಹಳ್ಳವು ಹತ್ತಿರದಲ್ಲೇ ಇತ್ತು[11] (ವಚನ 40). ಹಾಗೆಯೇ ಕರ್ಮೆಲ್ ಬೆಟ್ಟವು ಮೆಡಿಟರೇನಿಯನ್ ಸಮುದ್ರದದ ಬಲಗಡೆಯಲ್ಲಿ ಇದೆ. ಸಮುದ್ರದ ನೀರು ಕುಡಿಯಲಿಕ್ಕೆ ಯೋಗ್ಯವಲ್ಲ, ಆದರೆ ವಸ್ತುಗಳನ್ನು ಹಸಿಗೊಳಿಸಲು ಶ್ರೇಷ್ಟವಾದದ್ದಾಗಿದೆ. ನನ್ನ ಕುಟುಂಬ ಮತ್ತು ನಾನು 1968ರಲ್ಲಿ ಹಡಗಿನಲ್ಲಿ ಆಸ್ಟ್ರೇಲಿಯಾಕ್ಕೆ ಹೋಗಿದ್ದೆವು. ನಾವು ಶೇಖರಿಸಿಡಲಾದ ಟಾಕಿಗಳಿಂದ ನೀರನ್ನು ಕುಡಿದೆವು, ಆದರೆ ಸ್ನಾನವನ್ನು ಮಾತ್ರ ನಾವು ಸಮುದ್ರದ ನೀರಿನಲ್ಲಿಯೇ ಮಾಡಿದೆವು. ಸಾಗರದ ಹತ್ತಿರ, ಎಂದಿಗೂ ಕಡಿಮೆಯಾಗದ ಸಮುದ್ರದ ನೀರಿನ ಸರಬರಾಜು ಅಲ್ಲಿರುತ್ತದೆ.

ಬಲಿಕೊಡುವ ಮತ್ತು ಪ್ರತಿಯೊಂದು ಸುತ್ತಲಿನವುಗಳು ಒದ್ದೆಯಾಗುವದು ಎಂದರೆ ಇಲ್ಲಿನ ವಿಷಯವೇನು? ಅಲ್ಲಿ ಯಾವ ತಂತ್ರವೂ ಇಲ್ಲ ಎಂಬುದನ್ನು ಸಿದ್ಧಪಡಿಸಲು, ಅಲ್ಲಿ ಸ್ವಾಭಾವಿಕವಾದ ಯಾವ ಪದ್ಧತಿಗಳು ಆ ಬಲಿಯ ವಸ್ತುವನ್ನು ಸುಡಲು ಸಾಧ್ಯವಿಲ್ಲ. ವಿಗ್ರಹದ ಪೂಜಾರಿಗಳು ದೇವಾಲಯದಿಂದ ತೆಗೆದ ಬೆಂಕಿಯಿಂದ ಹೊಳೆಯುವ ಇದ್ದಿಲನ್ನು ಕಳ್ಳತನ ಮಾಡುವಂಥ ತಂತ್ರಗಳನ್ನು ಉಪಯೋಗಿಸುತ್ತಿದ್ದರು (ಇತಿಹಾಸದ ಪ್ರಕಾರ ಒಂದು

ಸಂದರ್ಭದಲ್ಲಿ ವೇದಿಕೆಯ ಕೆಳಗೆ ಒಂದು ತಗ್ಗನ್ನು ಮಾಡುತ್ತಿದ್ದರು, ಅಲ್ಲಿ ಒಬ್ಬ ಪೂಜಾರಿಯನ್ನು ಇಡುತ್ತಿದ್ದರು ಸರಿಯಾಗಿ [ಮಾನಸಶಾಸ್ತ್ರೀಯ] ಸರಿಯಾದ ಸಮಯದಲ್ಲಿ ಬೆಂಕಿಯು ಬೆಳಕಿನಂತೆ "ಅದ್ಭುತವಾಗಿ" ಹೊಳೆಯುತ್ತಿತ್ತು. ಕಾಲು ಭಾಗ ಹತ್ತಿರವಾಗುತ್ತಿದ್ದಂತೆಯೇ ಜೀವಂತ ಜ್ವಾಲೆಯ ಆಮ್ಲಜನಕವು ಕಡಿಮೆಯಾಗಿ ಆ ಪೂಜಾರಿಯು ತನ್ನ ಕೆಲಸವನ್ನು ಮಾಡುವ ಮೊದಲೇ ಉಸಿರುಗಟ್ಟಿಬಿಡುತ್ತಿದ್ದನು).

ಎಲೀಯನು ಪ್ರತಿಯೊಂದನ್ನು ವದ್ದೆಮಾಡಿದ್ದನು. ಆತನು ಜನರನ್ನು ನಿರ್ಧಾರದ ಸಮಯಕ್ಕಾಗಿ ಸಿದ್ಧಮಾಡುತ್ತಿದ್ದನು.

## ಪ್ರಾರ್ಥನಾ ಪೂರ್ವಕ ಎದುರಿಸುವಿಕೆ (18:36-39)

ಎಲೀಯನು ತಿರುಗಿ ತನ್ನ ದೇವರ ಎದುರಿನಲ್ಲಿ ಇದ್ದಾನೆ. ಬಾಳನ ಪ್ರವಾದಿಗಳು ಕೂಗುವುದರಲ್ಲಿ ಅರೇಳು ತಾಸಿನಿಂದ ತಲ್ಲೀನರಾಗಿದ್ದಾರೆ. ಇನ್ನೊಂದೆಡೆ ಎಲೀಯನು ಎರಡು ವಚನಗಳ ಉದ್ದದ ಸರಳವಾದ ಪ್ರಾರ್ಥನೆಯನ್ನು ಮಾಡುತ್ತಾನೆ. ಅಲ್ಲಿ ಯಾವ ಆವೇಶವಿಲ್ಲ, ಕೇವಲ ನಂಬಿಕೆ ಮತ್ತು ವಿಶ್ವಾಸ ಅಲ್ಲಿದೆ. (ಆತನು ಜನರಿಗೆ ತಾನು ಪ್ರಾರ್ಥಿಸುವ ಮುಂಚೆ ತನ್ನ ಹಿಂದೆ ನಿಲ್ಲಲು ಹೇಳುತ್ತಾನೆ ಎಂದು ಊಹಿಸಿಕೊಳ್ಳಿರಿ!)

> ಸಂಧ್ಯಾನೈವೇದ್ಯದ ಹೊತ್ತಿಗೆ ಪ್ರವಾದಿಯಾದ ಎಲೀಯನು ವೇದಿಯ ಹತ್ತಿರ ಬಂದು - ಅಬ್ರಹಾಮ್ ಇಸಾಕ್ ಇಸ್ರಾಯೇಲ್ಯರ ದೇವರೇ, ಯೆಹೋವನೇ, ನೀನೊಬ್ಬನೇ ಇಸ್ರಾಯೇಲ್ಯರ ದೇವರಾಗಿರುತ್ತೀ ಎಂಬುವುದನ್ನೂ ನಾನು ನಿನ್ನ ಸೇವಕಾಗಿರುತ್ತೇನೆಂಬುದನ್ನು ಇದನ್ನೆಲ್ಲಾ ನಿನ್ನ ಅಪ್ಪಣೆಯ ಮೇರೆಗೆ ಮಾಡಿದೆನೆಂಬದನ್ನೂ ಈ ಹೊತ್ತು ತೋರಿಸಿಕೊಡು. ಕಿವಿಗೊಡು ಯೆಹೋವನೇ ಕಿವಿಗೊಡು; ಯೆಹೋವನಾದ ನೀನೊಬ್ಬನೇ ದೇವರೂ ಈ ಜನರ ಮನಸ್ಸನ್ನು ನಿನ್ನ ಕಡೆಗೆ ತಿರುಗಿಸಿಕೊಳ್ಳುವವನೂ ಆಗಿರುತ್ತೀ ಎಂಬುದನ್ನು ಇವರಿಗೆ ತಿಳಿಯಪಡಿಸು ಎಂದು ಪ್ರಾರ್ಥಿಸಿದನು (ವಚನಗಳು 36, 37).

"ಕೂಡಲೇ ಯೆಹೋವನ ಕಡೆಯಿಂದ ಬೆಂಕಿ[12] ಬಿದ್ದು ಯಜ್ಞಮಾಂಸವನ್ನೂ ಕಟ್ಟಿಗೆ ಕಲ್ಲು ಮಣ್ಣುಗಳನ್ನೂ ದಹಿಸಿಬಿಟ್ಟು ಕಾಲಿವೆಯಲ್ಲಿದ್ದ ನೀರನ್ನೆಲ್ಲಾ ಹೀರಿಬಿಟ್ಟಿತು" (ವಚನ 38). ನಾನು ಹೆಚ್ಚಿನ ಶಿಬಿರಗಳಲ್ಲಿ ವಾಸ ಮಾಡಿದ್ದರಿಂದ; ಕಲ್ಲುಗಳು ಸುಡುವುದಿಲ್ಲ ಮತ್ತು ಬೆಂಕಿಯನ್ನು ಆರಿಸುವುದಿಲ್ಲ ಎಂದು ನಾನು ಬಲ್ಲೆನು. ಕರ್ತನ ಬೆಂಕಿಯು ಕಲ್ಲನ್ನೂ ಕೊಳೆಯನ್ನೂ ಎಲ್ಲವನ್ನೂ ದಹಿಸಿಬಿಟ್ಟಿತು. ಎಂಥಹ ಚಮತ್ಕಾರದ ದೃಷ್ಯವು ಇದಾಗಿರಬಹುದಲ್ಲವೇ! ಆ ಸ್ಥಳವನ್ನು ಬೇಟಿಮಾಡಿದ ಜನರು ಆ ಬೆಂಕಿಯು ಅನೇಕ ಮೈಲಿಗಳವರೆಗೂ ಇಜೆಬೇಲಳು ಆಳ್ವಿಕೆ ಮಾಡುತ್ತಿದ್ದ ಇಸ್ರಾಯೇಲಿನಲ್ಲಿಯೂ ಕಾಣುತ್ತಿತ್ತು ಎಂದು ನಮಗೆ ಹೇಳುತ್ತಾರೆ (1 ಅರಸು 18:46; 19:1)!

ಜನಜಂಗುಳಿಯ ಮೇಲೆ ಇದರ ಪರಿಣಾಮ ಏನಾಗಿತ್ತು? "ಜನರೆಲ್ಲರೂ ಅದನ್ನು ಕಂಡು ಬೋರ್ಲಬಿದ್ದು ಯೆಹೋವನೇ ದೇವರು ಯೆಹೋವನೇ ದೇವರು ಎಂದು ಕೂಗಿದರು" (ವಚನ 39). ಕರ್ತನು NASBಯಲ್ಲಿ ಎಲ್ಲವೂ ದೊಡ್ಡಕ್ಷರದಲ್ಲಿ ಇದ್ದು, ಇದು ದೇವರ ಪವಿತ್ರ ಹೆಸರಿಗಾಗಿ ಇದೆ ಎಂಬುದನ್ನು ತೋರಿಸುವುದಾಗಿದ್ದು ಯಾವಾಗಲೂ "ಯೆಹೋವ" ಎಂದು ಭಾಷಾಂತರವಾಗಿರುತ್ತದೆ. ಬಾಳನು ದೇವರಲ್ಲ; ಯೆಹೋವನೇ ದೇವರು! ಎಂದು ಜನರು ಘೋಷಿಸಿದರು. ವರ್ಷದಲ್ಲಿ ಮೊದಲನೆಯ ಸಾರಿ ಯೆಹೋವನ ಹೆಸರು ಜನರ ತುಟಿಯ ಮೇಲೆ ಇತ್ತು. ಕೆಲ ಕ್ಷಣಗಳಲ್ಲಿ ಅನಿರ್ಧಾರತೆಯು ಹೋಯಿತು.

## ಪ್ರಾಯೋಗಿಕವಾದ ಸಂಧಿಸುವಿಕೆ (18:40)

ಕಥೆಯನ್ನು ಮುಗಿಸಲು ನಮಗೆ 40ನೇಯ ವಚನವನ್ನು ಓದುವದು ಅವಶ್ಯವಿದೆ:

“ಆಗ ಎಲೀಯನು ಅವರಿಗೆ - ಬಾಳನ ಪ್ರವಾದಿಗಳೆಲ್ಲರನ್ನೂ ಹಿಡಿಯಿರಿ; ಅವರಲ್ಲಿ ಒಬ್ಬನೂ ತಪ್ಪಿಸಿಕೊಳ್ಳಬಾರದು ಎಂದು ಆಜ್ಞಾಪಿಸಲು ಅವರು ಹಿಡಿದರು. ಅವನು ಅವರನ್ನು ಕೀಷೋನ್ ಹಳ್ಳಕ್ಕೆ ಒಯ್ದು ಅಲ್ಲಿ ಕೊಲ್ಲಿಸಿದನು.’’

‘‘ಎಲೀಯನ ಪ್ರೇರೇಪಿಸುವಿಕೆಯ’’ ಕಾರ್ಯದಲ್ಲಿ ನಿಜವಾಗಿ ಜನರು ಏನು ಮಾಡಿದರೆಂಬುದರ ವಿವರಗಳನ್ನು ಜೋಸ್ಫ್‌ಸ್‌ನು ಕೂಡಿಸುವವನಾಗಿದ್ದಾನೆ.

ಈ ಕ್ರೂರತೆಯನ್ನು ನೋಡುವಾಗ ನಾವು ಆಘಾತಕ್ಕೊಳಗಾಗುತ್ತೇವೆ. ಮುಂದಿನ ಪಾಠದಲ್ಲಿ ನಾವು ಇಂಥ ಕ್ರಿಯೆಗಳನ್ನು ಒಳಗೊಂಡಿರುವವುಗಳ ಜೊತೆ ನಾವು ವ್ಯವಹರಿಸುವವರಾಗಿ ದ್ದೇವೆ; ಆದರೆ ಕೆಲಕ್ಷಣದಲ್ಲಿ ಕೆಲ ಅಂಶಗಳನ್ನು ನಾವು ಪರಿಗಣಿಸುವಾ: ಧರ್ಮಶಾಸ್ತ್ರವು ಸುಳ್ಳು ಪ್ರವಾದಿಗಳನ್ನು ಕೊಲ್ಲಬೇಕೆಂದು ಆಜ್ಞೆಮಾಡಿದೆ (ಧರ್ಮೋಪದೇಶಕಾಂಡ 7:1-5; 13:13, 14). ಇದು ಅರಸನಿಂದ ಮಾಲ್ಪಡಬೇಕಾಗಿತ್ತು, ಆದರೆ ಇದಾಗಲಿಲ್ಲ; ವಾಸ್ತವವಾಗಿ ಈ ಪ್ರವಾದಿಗಳು ಆತನ ಸಂರಕ್ಷಣೆಯಲ್ಲಿ ಇದ್ದರು. ಮಾನವನು ದೇವರ ನಿಯಮವನ್ನು ಗೌರವಿಸಬೇಕು ಎಂದು ಎಲೀಯನು ತಿರುಗೊಂದಾವರ್ತಿ ಪ್ರಾಯೋಗಿಕತೆಯನ್ನು ನಡೆಸಿದನು.

ಈ ಪರಿಸ್ಥಿಯನ್ನು ಇನ್ನೊಂದು ರೀತಿಯಲ್ಲಿ ಗಮನಹರಿಸುವಾಗ, ರಾಷ್ಟ್ರದಲ್ಲಿ ಅಪಪ್ರಚಾರವು ಇತ್ತು. ವೈದ್ಯರು ಅತ್ಯುಗ್ರವಾದ ಹುಣ್ಣನ್ನು ಹೇಗೆ ಶುಶ್ರೂಷೆ ಮಾಡುತ್ತಾರೆ? ಅದರಲ್ಲಿ ಕೆಲವನ್ನು ಕೇವಲ ತೆಗೆದುಬಿಡುವುದಿಲ್ಲ. ಬದಲಾಗಿ ಆತನು ಸಮಗ್ರವಾದ ಗಡ್ಡೆಯನ್ನು ತೆಗೆಯಲು ಪ್ರಯತ್ನಿಸುತ್ತಾನೆ. ಆತನು ಅದರ ಸುತ್ತಲಿನ ಎಳೆಗಳನ್ನೂ ತೆಗೆದುಬಿಡುತ್ತಾನೆ. ಆತನು ತನ್ನ ರೋಗಿಯು ಎಲ್ಲ ರೀತಿಯಲ್ಲಿ ಗುಣ ಹೊಂದಬೇಕೆಂದು ಬಯಸುವವನಾಗಿದ್ದಾನೆ ಅದೇ ಪ್ರಯತ್ನವು ಇಲ್ಲಿದೆ.

## ಮುಕ್ತಾಯ

18ನೇಯ ಅಧ್ಯಾಯವು ಕುತೂಹಲಕಾರಿಯಾದದ್ದು; ಇದು ಇಸ್ರಾಯೇಲ್ಯರಿಗೆ “ನಿರ್ಧಾರದ ಸಮಯ’’ ಆಗಿದೆ. ಇಂದು ನಮಗೆ ನಿರ್ಧಾರದ ಸಮಯವಾಗಿದೆ.

ಮೂರು ಮೂಲ ಗುಂಪುಗಳು ಕರ್ಮೆಲ ಬೆಟ್ಟದಲ್ಲಿ ಉಪಸ್ಥಿತವಿವೆ ಅಲ್ಲಿ ಅಸ್ತಿತ್ವವಿರುವ ಮೂರು ಗುಂಪಿನವರು ಯಾವುದೇ ಸಮಯದಲ್ಲಿ ಹೆಚ್ಚಾಗಿ ಒಳ್ಳೆಯ ಸಂಖ್ಯೆಯ ಜನರೊಂದಿಗೆ ಕೂಡಿಬರುತ್ತಿದ್ದರು.

ಮೊದಲು, ಅಲ್ಲಿ ಎಲೀಯನಂತವರು, ಸಂಪೂರ್ಣವಾಗಿ ದೇವರಿಗೆ ಸಮರ್ಪಿತರಾದವರು, ಆತನ ಚಿತ್ತವನ್ನು ಮಾಡುವದಕ್ಕೆ ಒಪ್ಪಿಸಿಕೊಂಡವರೂ ಆಗಿದ್ದರು. ದುರದುಷ್ಟವಾಶಾತ್ ಈ ಗುಂಪು ಯಾವಾಗಲೂ ಅಲ್ಪಸಂಖ್ಯೆಯಿಂದ ಕೂಡಿರುತ್ತದೆ ಅವರು ಒಬ್ಬನೇ ದೇವರಿಂದ ಉಪಯೋಗಿತರಾದವರೂ ಒಬ್ಬನೇ ದೇವರನ್ನು ಎದುರುನೋಡುವವರೂ ಆಗಿದ್ದರು.[13] ಇಂದು ಒಂದು ವೇಳೆ ದೇವರು ಆತನಿಗಾಗಿ ಉಪಯೋಗವಾಗುವ ಮನುಷ್ಯನನ್ನು, ಸ್ತ್ರೀಯನ್ನೂ, ಬಾಲಕನನ್ನೂ, ಬಾಲಕಿಯನ್ನೂ ನೋಡುವುದಕ್ಕೋಸ್ಕರ ದೇವರೇನಾದರೂ ಆರಾಧನಾ ಸಭೆಗೆ ಬಂದರೆ? ಆತನು ನಿನ್ನ ಹತ್ತಿರ ಬಂದು ನಿನ್ನನ್ನು ತೋರಿಸಿ. “ಅಲ್ಲಿ ಒಂದು ಹೃದಯವು ನನ್ನ ಮೇಲೆ ನಿಂತಿದೆ; ಅಲ್ಲಿ ಒಬ್ಬನನ್ನು ನನ್ನ ಸೇವೆಗಾಗಿ ಉಪಯೋಗಿಸಬಹುದಲ್ಲಾ?’’ ಎಂದು ಕೇಳುವನು ಚರ್ಚಿನಲ್ಲಿ ನಾವು ಅಂತಹ ಜನರನ್ನು ಹೊಂದಿರುವದಕ್ಕಾಗಿ ದೇವರಿಗೆ ವಂದನೆಯವನ್ನು ಹೇಳಬೇಕು: ಪುರುಷ, ಸ್ತ್ರೀ, ಬಾಲಕ, ಬಾಲಕಿಯರ ಅವಶ್ಯಕತೆಗೆ ಅನುಗುಣವಾಗಿ ಸತ್ಯಕ್ಕೆ ಏಕಾಂಗಿಯಾಗಿ ನಿಲ್ಲಲು ಸಿದ್ಧರಾಗಿರುತ್ತಾರೆ.

ಎರಡನೆಯದಾಗಿ, ಬಾಳನ ಪ್ರವಾದಿಗಳಂಥ ಪ್ರವಾದಿಗಳು ಅಲ್ಲಿದ್ದಾರೆ, ಅವರು ಪಾಪದಿಂದ ಕಠಿಣರಾಗಿದ್ದಾರೆ ಮತ್ತು ಅನೈತಿಕತೆಗೆ ಅರ್ಪಿಸಿಕೊಂಡಿದ್ದಾರೆ. ಇವರನ್ನು ಪರಿವರ್ತಿಸಲು ಎಲೀಯನು ಪ್ರಯತ್ನಿಸಲಿಲ್ಲ. ಇದು ದುಃಖಕರವಾದದ್ದು ಆದರೆ ನಿಜವಾಗಿಯೂ ಇಂಥ ಜನರು ಇದ್ದೇ ಇರುತ್ತಾರೆ. ಅವರ ಬಗೆಗೆ ಮಾತನಾಡುವ ಅವಶ್ಯಕತೆಯು ಅಲ್ಲಿಲ್ಲ. ಅವರು

ಅನೇಕ ಪ್ರಸಂಗಗಳನ್ನು ಕೇಳಿದ್ದಾರೆ ಸತ್ಯ ಅವರನ್ನು ಹೊರಳಾಡಿಸುತ್ತದೆ ನೀವು ಅವರಿಗೆ ಏನನ್ನಾದರೂ ಹೇಳಲು ಹೋದರೆ, ಅವರು "ನನ್ನನ್ನು ಏಕಾಂತವಾಗಿರಲು ಬಿಡು! ನನಗೆ ಬೋಧಿಸಬೇಡಿ" ಎಂದು ಪ್ರತಿಕ್ರಿಯಿಸುತ್ತಾರೆ.

ಅಲ್ಲಿ ಮೂರನೆಯ ಗುಂಪಿದೆ ಇದು ದೊಡ್ಡ ಗುಂಪು: ಇಸ್ರಾಯೇಲ್ಯರ ಮಕ್ಕಳು, ವಿಭಿನ್ನ ಶ್ರದ್ಧೆಯೊಡನೆ, ಎರಡು ವಿಚಾರಗಳ ನಡುವೆ ಜಿಗಿಯುತ್ತಾ ಇರುವವರ ಗುಂಪು ಇದು. ಅವರು ಭಯಂಕರವಾದ ಕೆಟ್ಟತನದಲ್ಲಿ ಇಲ್ಲ, ಆದರೆ ಭಯಂಕರವಾದ ಒಳ್ಳೇತನದಲ್ಲಿಯೂ ಇರಲಿಲ್ಲ. ಇದು ಎಲೀಯನು ಮಾತನಾಡಿದ ಗುಂಪಾಗಿತ್ತು; ಆತನಿಗೆ ಕಾಳಜಿಯಿದ್ದ ಗುಂಪು ಇದಾಗಿತ್ತು; ಆತನು ನಿರ್ಧಾರವನ್ನು ತೆಗೆದುಕೊಳ್ಳಲು ಆಹ್ವಾನವಿತ್ತ ಗುಂಪು ಇದಾಗಿತ್ತು.

ನಮ್ಮಲ್ಲಿ ಅನೇಕರು ಆತ್ಮೀಕವಾಗಿ ಕುಂಟುವರಾಗಿರುತ್ತೇವೆ ಅಲ್ಲವೇ? ಎಲೀಯನು ಬಲು ದಿನದ ಹಿಂದೆಯೇ ನಮಗೆಲ್ಲ ಆಹ್ವಾನವನ್ನು ಕೊಟ್ಟಿದ್ದಾನೆ. ನೀನು ಸೇವಮಾಡಬೇಕಾದುದಕ್ಕೆ ನಿನ್ನ ಮನಸ್ಸನ್ನು ಸಿದ್ಧಮಾಡಿಕೋ! ಶಕ್ತಿಯು ನಿನ್ನ ದೇವರಾಗಿದ್ದರೆ ಯೆಹೋವನ ಬಗೆಗೆ ಮರೆತುಬಿಡು ಮತ್ತು ಶಕ್ತಿಯ ಸೇವೆಯನ್ನೇ ಮಾಡು. ಹಣವು ನಿನ್ನ ದೇವರಾಗಿದ್ದರೆ ಯೆಹೋವನ ಬಗೆಗೆ ಮರೆತು ಬಿಡು ಮತ್ತು ಹಣದ ಸೇವೆಯನ್ನೇ ಮಾಡು ಯೆಹೋವನು ನಿನ್ನ ದೇವ ರಾಗಿದ್ದರೆ ನಿನ್ನ ಮನಸ್ಸನ್ನು ಸಿದ್ಧಪಡಿಸಿಕೋ: "ಯಾರೊಬ್ಬನೂ ಇಬ್ಬರು ಒಡೆಯರಿಗೆ ಸೇವಕನಾಗಿರಲಾರನು" (ಮತ್ತಾಯ 6:24).

ಪ್ರತಿಯೊಬ್ಬ ವ್ಯಕ್ತಿಯು ಪ್ರತಿದಿನ ಸಂಪೂರ್ಣವಾಗಿ ದೇವರಿಗೆ ತನ್ನನ್ನು ಸಮರ್ಪಿಸಿಕೊಂಡು ಹೀಗೆ ಹೇಳುತ್ತಾನೆ. "ಆತನೇ ಕರ್ತನು, ಆತನು ದೇವರು; ಆತನೇ ಕರ್ತನು, ಆತನು ದೇವರು. ಇದು ಒಬ್ಬನು ಅವಳ ಅಥವಾ ಅವನ ಜೀವಿತವನ್ನು ಕರ್ತನಿಗೆ ಒಪ್ಪಿಸವುದನ್ನು ನಿರ್ಧರಿಸಿ ತನ್ನ ಕೆಲಸಗಳಿಗೆ ಅಥವಾ ಶಾಲೆಗೆ ಮರಳಿ ಅಲ್ಲಿ ದೇವರ ಸ್ತ್ರೀ ಅಥವಾ ಪುರುಷರ ಪ್ರಭಾವದ ಕಾರ್ಯಕ್ಷೇತ್ರವನ್ನಾಗಿಸುವದಕ್ಕೆ ಸಮಾನವಾದದ್ದು ರೋಮಾಂಚಕವಾದುದ್ದು ಮತ್ತೊಂದಿಲ್ಲ.

ಆ ನಿರ್ಧಾರವನ್ನು ತೆಗೆದುಕೊಳ್ಳಲು ಅದ್ಭುತೀಯವಾದ ಬೆಂಕಿಯು ನಿನಗೆ ಸಹಾಯಿಸಲು ಬರುವುದಿಲ್ಲ, ಆದರೆ ನಾವು ದೇವರ ವಾಕ್ಯವನ್ನು ಅಭ್ಯಾಸಿಸುತ್ತಿದ್ದೇವೆ ಮತ್ತು ಅದನ್ನು ಬಲಯುತವಾಗಿ ನಂಬುತ್ತೇವೆ (ರೋಮಾಪುರ 1:16). ಯೆರೆಮಿಾಯನು ಇದನ್ನು "ಬೆಂಕಿ" ಎಂದು ಹೇಳಿದ್ದಾನೆ (ಯೆರೆಮಿಾಯ 5:14; 23:29; 1:13). ಅದರ ಉರಿಯುವಿಕೆಯ ಅನುಭವ ನಿನ್ನ ಎಲುಬುಗಳಲ್ಲಿ ನಿನಗಾಗಿದೆಯೋ?

*ನೀನು* "ದೇವರ ವಾಕ್ಯವು ನಿಜವಾದುದು! ಯೆಹೋವನೇ ದೇವರು! ನಾನು ವಿಧೇಯ ನಾಗುವದು ಅವಶ್ಯವಿದೆ" ಎಂದು ಹೇಳಿದೆ ಎಂದು ನಾನು ಆಶಿಸುತ್ತೇನೆ.

---

ಟಿಪ್ಪಣೆಗಳು

[1]ಬೈಬಲಿನ ವಿಮರ್ಶಕರು "ಮೂರುವರ್ಷಗಳಲ್ಲಿ" ಈ ಪದಪುಂಜದಲ್ಲಿ ಮತ್ತು ಹೊಸ ಒಡಂಬಡಿಕೆಯ ಮೂರು ವರ್ಷ ಆರು ತಿಂಗಳು ಬರ ಬಂತು ಎಂಬ ಹೇಳಿಕೆಯ ಮಧ್ಯದಲ್ಲಿನ ವಿಪರ್ಯಾಸವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಎಲೀಯನು ಬಹುಶಃ ಹೆಚ್ಚುಕಡಿಮೆ ಒಂದು ವರ್ಷವನ್ನು ಚಾರೆಪ್ತಾದಲ್ಲಿ ಕಳೆದಿರಬಹುದು ("ಮೂರನೆಯ ವರ್ಷದಲ್ಲಿ") ಇದು ಮೂರುವರೆ ವರ್ಷದಲ್ಲಿ ಸೇರುತ್ತದೆ. [2]ಈ ಚಿಕ್ಕ ಕಥೆಯನ್ನು ಚಿತ್ತಾಕರ್ಶಕವಾಗಿ ಹೇಳುತ್ತಾ ಹೋಗಲು ಪ್ರಸಂಗದಲ್ಲಿ ಸಮಯವಿರುವದಿಲ್ಲ. ಈ ಪಾಠದ ಕೊನೆಯಲ್ಲಿರುವ ಒಬದ್ಯನ ಪಾಠವನ್ನು ನೋಡಿರಿ. [3]ಇಲ್ಲಿ ಬಹುವಚನದ ರೂಪವು ಬಳಸಲ್ಪಟ್ಟಿದೆ ಯಾಕೆಂದರೆ ಬಾಳನ ಆರಾಧನೆಗೆ, ಅಶೇರನ್ನು ಒಳಗೊಂಡು ಅನೇಕ ರೀತಿಯ ಆರಾಧನೆಗಳು ಪರಿಚಯಿಸಲ್ಪಟ್ಟಿದೆ. [4]ಈ ಸಂಗತಿಯಲ್ಲಿ U.S. ನಲ್ಲಿ ಕಳೆದ 1800ರ ಕೊನೆಯ ಭಾಗದಲ್ಲಿ ಲಾರ್ಡ್ಸ್ ಚರ್ಚಿನಲ್ಲಿ ಆರಾಧನೆಗೆಂದು ಸಂಗೀತದ ಸಾಧನಗಳನ್ನು ಬಳಸಲಾಗುತ್ತಿತ್ತು. ಈ ಸಾಧನಗಳನ್ನು ಪರಿಚಯಿಸಿದವರು ಹೇಳುವುದೇನೆಂದರೆ ಅವರ ಮತ್ತು ವಿರೋಧಿಸುವವರ ಮಧ್ಯೆ ಬೇಧವು ಉಂಟಾಯಿತು. ಇದನ್ನು ವಿರೋಧಿಸಿದವರು ಉತ್ತರಿಸುವುದೇ

ನೆಂದರೆ "ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಬೇಧಗಳನ್ನೂ ವಿಘ್ನಗಳನ್ನೂ ನಿಮ್ಮಲ್ಲಿ ಉಂಟುಮಾಡಿದವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿ ಹೋಗಿರಿ" (ರೋಮಾಪುರ 16:17). [5]"ಕರ್ಮೆಲ್" ಇದರ ಅರ್ಥವು "ತೋಟಗಳ ಭೂಮಿ" ಅಥವಾ "ಪಾರ್ಕ" ಆಗಿದೆ. ಇದು ಉತ್ತರ ಇಸ್ರಾಯೇಲಿನ ಫಲವತ್ತಾದ ಪಟ್ಟಿಯಾಗಿದೆ. ಕರ್ಮೆಲ್ "ಬೆಟ್ಟ ನಿಜವಾಗಿಯೂ ಉದ್ದದಲ್ಲಿ 12 ಮೈಲಿಯ ದಿಬ್ಬವನ್ನು ಹೊಂದಿತ್ತು. ಸಂಧಿಸುವಿಕೆಯ ಸಾಂಪ್ರದಾಯಿಕ ಸ್ಥಳವು ಬಾಳನ ಪ್ರವಾದಿಗಳ ಸಂಧಿಸುವಿಕೆಯ ಎತ್ತರದ ಸ್ಥಳವಾಗಿದೆ, ಈಗ ಅದು "ಎಲ್ ಮುಕ್ರ" ಎಂದು ಕರೆಯಲ್ಪಡುತ್ತಿದ್ದು ಇದರ ಅರ್ಥವು ಉರಿಯುವ ಸ್ಥಳ ಎಂದೇ ಆಗಿದೆ. [6]ಆ ಸಭೆಯಲ್ಲಿ ಹಾಜರಿದ್ದ ಸಂಖ್ಯೆಯನ್ನು ಲೆಕ್ಕಹಾಕಿ, ನಂತರ ಅದನ್ನು ಕೂಡಿಸಿ, ದ್ವಿಗುಣಗೊಳಿಸಿ, ಅದರಿಂದ ತೆಗೆದುಕೊಳ್ಳಿ, ಅಥವಾ ಒಟ್ಟು 450 ಸಂಖ್ಯೆಯು ಬರುವುದಕ್ಕೆ ಏನೇನು ಅವಶ್ಯವೋ ಅದನ್ನು ಮಾಡಿರಿ. [7]Clyde M. Miller, *First and Second Kings*, Living Word Commentary (Abilene, Tex.: A.C.U. Press, 1991), 7:272. [8]ಅಕ್ಷರಶಃ ಇಬ್ರಿಯ ಭಾಷೆಯ "ಮಾತು ಒಳ್ಳೇಯದಾಗಿದೆ" ಎಂದೇ. [9]"ಕುಂಟು" ಎಂಬ ಪದವು ಅದೇ ಇಬ್ರಿಯ ಪದದ ಭಾಷಾಂತರವಾದ "ಹಿಂಜರಿ" ವಚನ 21ರ ಭಾಷಾಂತರವಾಗಿದೆ. ಎರಡೂ ಪದಗಳು ಅಕ್ಷರಶಃ ಅರ್ಥವು "ಕುಂಟುತ್ತ ನಡೆ" ಎಂದಾಗಿದೆ. ಒಂದು ಭಾಷಾಂತರವು "ಅವರು ವೇದಿಕೆಯ ಸುತ್ತಲೂ ಕುಂಟುತ್ತ ನಡೆದರು" ಎಂದಿದೆ. ಅವರೇನು ಮಾಡುತ್ತಿದ್ದರೋ ಅದು ವಿಕೃತವಾದದ್ದಾಗಿತ್ತು. [10]ದಾಖಲೆಗಳಿಂದ ಬಾಳನ ಆರಾಧನೆಯ ಜೊತೆ ಇತರ ಮೂರ್ತಿ ಪೂಜೆಗೆ ಸಂಬಂಧಿಸಿದ ದಾಖಲೆಗಳು ಇವೆ.

[11]ಆ ಹಳ್ಳವು ಇನ್ನು ಹರಿಯುತ್ತದೆ. ಅದು ಅರೇಬಿಕನಲ್ಲಿ "ಸಾಮೂಹಿಕ ಕೊಲೆಯ ನದಿ" ಎಂದು ಕರೆಯಲ್ಪಡುತ್ತಿದೆ. ಇದು ಪಾಲಿಸ್ತೈನಿನ ಒಂದು ಮಹತ್ವದ ನದಿಯಾಗಿದೆ, ಯೋರ್ದನ ಎರಡನೆಯದಾಗಿದೆ. [12]ವಿಮರ್ಷಕರು ಯಾವಾಗಲೂ ಸೂಚಿಸುವುದೇನೆಂದರೆ ಅದು ಹೊಳೆಯುವಂತದ್ದಾಗಿತ್ತು ಎಂದು. ನಾವು ತಿಳಿದಂತೆ ಎರಡು ಕಾರಣಗಳಿಂದ ಇದು ಸಾಮಾನ್ಯವಾದ ಬೆಂಕಿಯಲ್ಲ: 1) ಅದು ಕಲ್ಲನ್ನು ಧೂಳನ್ನು ಮುಂತಾದವುಗಳನ್ನು ದಹಿಸಿತು. ಸಾಮಾನ್ಯವಾದ ಬೆಂಕಿಯು ಅದನ್ನೆಲ್ಲ ಮಾಡುತ್ತಿರಲಿಲ್ಲ. 2) ಅದು ಮೋಡಗಳಿಲ್ಲದ ಆಕಾಶದಿಂದ ಬಂದುದಾಗಿತ್ತು (ವಚನ 43). ಸಮಯ ಅನುಮತಿಸಿದರೆ, ಇಲ್ಲಿ ಎಹೆಜ್ಕೇಲ 22:23-30 ಉಪಯೋಗಿಸಿರಿ.

---

## ಪಾಠದ ರೂಪರೇಶೆ

**ಪರಿಚಯ**

A. ಮೊದಲ ಅರಸು 18 ಬೈಬಲಿನಲ್ಲಿಯ ಒಂದು ಉತ್ತೇಜನಕಾರಿ ಅಧ್ಯಾಯ ವಾಗಿದೆ.

B. ಈ ಅಧ್ಯಾಯದಲ್ಲಿ ನಾವು ಸಂಧಿಸುವಿಕೆಯ ಸರಣಿಗಳನ್ನು ಹೊಂದಿದ್ದೇವೆ: ಒಬ್ಬರು ಅಥವಾ ಹೆಚ್ಚು ಜನರಿಂದ ಸಂಧಿಸುವಿಕೆಗೆ ಒಳಗಾದನು.

I. ದಿವ್ಯ ಸಂಧಿಸುವಿಕೆ (18:1, 2ಅ)

A. ದಿವ್ಯ ಸಂಧಿಸುವಿಕೆಯು ದೇವರು ಮತ್ತು ಎಲೀಯರ ಮಧ್ಯೆ ಸಂಭವಿಸಿತು.

B. ದೇವರು "ಹೋಗು" ಎಂದನು ಮತ್ತು ಎಲೀಯನು ವಿಧೇಯನಾದನು.

II. ದೈವನಿಯಾಮಕ ಸಂಧಿಸುವಿಕೆ (18:2ಬಿ-16)

A. ಈ ವಚನಗಳು ಈ ಉಪಕಥೆಯು ಎಲೀಯ ಮತ್ತು ಆಹಾಬರು ಹೇಗೆ ಒಟ್ಟಿಗೆ ಸೇರಿದರು ಎಂದು ಹೇಳುತ್ತದೆ. ಇದು ಸಂಧಿಸುವಿಕೆಯು ಒಬದ್ಯ ಮತ್ತು ಲೀಯರದ್ದು ಆಗಿದೆ.

B. ಒಬದ್ಯನು ಆಹಾಬನ ಸೇವಕ ಆಹಾಬನ ಪ್ರಾಣಿಗಳಿಗಾಗಿ ಹುಲ್ಲುಗಾವಲು ಗಳನ್ನು ಹುಡುಕಲು ಬಂದಿದ್ದನು. ಒಬದ್ಯನು ಹುಡುಕುತ್ತಿದ್ದಂತೆ, ಆತನು ಎಲೀಯನನ್ನು ಭೇಟಿಯಾದನು. ಎಲೀಯನು ಆತನಿಗೆ (ಒಬದ್ಯನಿಗೆ) "ಎಲೀಯನು ಬಂದಿದ್ದಾನೆ" (ವಚನ 11) ಎಂದು ಆತನ ಒಡೆಯನಿಗೆ (ಆಹಾಬನಿಗೆ) ತಿಳಿಸಲು ಹೇಳಿದನು. ಇದು ಒಬದ್ಯನನ್ನು ಅಸಾಯಕನನ್ನಾಗಿಸಿತು (ವಚನಗಳು 9-12). ಆದರೆ ಎಲೀಯನು ಅವನಿಗೆ

ಅಭಯ ವಚನ ನೀಡಿದನು (ವಚನ 15).

III. ರಾಜತ್ವದ ಸಂಧಿಸುವಿಕೆ (18:17-20)

A. ಆಹಾಬ ಮತ್ತು ಎಲೀಯರು ಮೂರು ವರ್ಷಗಳಲ್ಲಿ ಮೊದಲ ಬಾರಿ ಮುಖಾಮುಖಿಯಾಗಿ ಎದುರಾದರು. ಆಹಾಬನು ಎಲೀಯನನ್ನು ಎಲ್ಲಾ ತೊಂದರೆಗಳಿಗೆ ನೀನೇ ಕಾರಣ ಎಂದು ಜರಿದನು (ವಚನಗಳು 2ಬಿ, 17). ಆದರೆ ಎಲೀಯನು ಅವನನ್ನು ಹೇದರಿಸಲಿಲ್ಲ (ವಚನ 18). (ಯಾವಾಗ ಜನರು ದೇವರಿಗೆ ಅವಿದೇಯರಾಗುತ್ತಾರೋ ಆಗ ಉಂಟಾಗುವಂತಹ ಸಮಸ್ಯೆಗಳ ಪರಿಣಾಮಕ್ಕೆ ಅವೇ ಕಾರಣರಾಗುತ್ತಾರೆ; ಅದನ್ನು ವಿರೋಧಿಸುವಂತಹ ಜನರು ಆ ಸಮಸ್ಯೆಗಳಿಗೆ ಕಾರಣರಾಗುವದಿಲ್ಲ! ರೋಮಾಪುರ 16:17.)

B. ಎಲೀಯನು ಆಹಾಬನಿಗೆ ಬಾಳನ ಪ್ರವಾದಿಗಳನ್ನು ಕರ್ಮೆಲ್ ಬೆಟ್ಟದಲ್ಲಿ ಸೇರಿಸಲು ಹೇಳುತ್ತಾನೆ (ವಚನ 19).

1. ಕರ್ಮೆಲ ಬೆಟ್ಟವು ಪವಿತ್ರ ಸ್ಥಳ ಎಂದು ಅನೇಕರಿಂದ ಪರಿಗಣಿಸಲ್ಪಟ್ಟಿದೆ.
2. ಇದೊಂದು ಉನ್ನತವಾದ ಪ್ರದೇಶವಾಗಿದ್ದು ವಿಗ್ರಹಾರಾಧನೆಯನ್ನು ತೆಗೆದು ನಿಜದೇವರ ಆರಾಧನೆಯನ್ನು ಆರಂಭಿಸಿದ ಸ್ಥಳ ಇದಾಗಿದೆ.
3. ಇದೊಂದು ಆಯಕಟ್ಟಿನ ಸ್ಥಳವಾಗಿದೆ.

IV. ವೈಯಕ್ತಿಕ ಸಂಧಿಸುವಿಕೆ (18:21-24)

A. ಕರ್ಮೆಲ್ ಬೆಟ್ಟದಲ್ಲಿ ಇರುವಗುಂಪುಗಳ ಚಿತ್ರ.

1. ಒಂದೆಡೆ:
   a. ಬಾಳನ 450 ಪ್ರವಾದಿಗಳು ಮತ್ತು ಅವರ ಜೊತೆಗಾರರು
   b. ಸಾವಿರಾರು ಜನ ಇಸ್ರಾಯೇಲ್ಯರು ನೋಡುತ್ತಿದ್ದಾರೆ: ಬಲು ಮುಖ್ಯವಾದ ಜನರು, ನಾಯಕರು, ಅವರೊಡನೆ ಇನ್ನೂ ಇತರರು
   c. ಅರಸ ಮತ್ತು ಆತನ ಜೊತೆಗಾರರೂ ಅಲ್ಲಿ ಇದ್ದರು
2. ಇನ್ನೊಂದೆಡೆ ಒಬ್ಬಂಗಟಿಗನಾದ ಎಲೀಯ ಆದರೆ ಅವರ ಬಗಗೆ ಖೇದವ್ಯಕ್ತಪಡಿಸಲಿಲ್ಲ.
   a. ಇದು 1,000 ದಿಂದ 1 ರ ಬೆಸ ಸಂಖ್ಯೆಯು ಅಲ್ಲ; ಇದು 1,000 ದಿಂದ 1+ ದೇವರು ಆಗಿದೆ.
   b. ಎಲೀಯನು ನಿಯಂತ್ರಣದಲ್ಲಿ ಇದ್ದನು. ಈ ಅಧ್ಯಾಯದಲ್ಲಿ ಎಲೀಯನು ಅನೇಕ ಸಾರಿ ಮಾತನಾಡಿದ್ದಾನೆ. ಆತನು ಪ್ರತಿಸಾರಿ ಮಾತನಾಡುವಾಗ ಅಧಿಕಾರದಿಂದ ಮಾತನಾಡುತ್ತಾನೆ; ಸಾಮಾನ್ಯವಾಗಿ, ಇದು ಆಜ್ಞೆಯಾಗಿರುತ್ತದೆ.

B. ಎಲೀಯನ ಸಂಧಿಸುವಿಕೆಯು ಕರ್ಮೆಲ್ ಬೆಟ್ಟದಲ್ಲಿ ಮೂಲತಃವಾಗಿ ಬಾಳನ ಪ್ರವಾದಿಗಳೊಡನೆ ಅಥವಾ ಅರಸರೊಡನೆ ಇರಲಿಲ್ಲ ಆದರೆ ಜನರೊಂದಿಗೆ ಇತ್ತು.

1. ಎಲೀಯನು ಅವರಿಗೆ "ಇದು ನಿರ್ಧಾರದ ಸಮಯ" ಎಂದು ಹೇಳಿದನು (ವಚನ 21).
2. ಜನರು ಆತನಿಗೆ ಉತ್ತರಿಸಿದ್ದು "ಪದಗಳಿಂದಲ್ಲ" (ವಚನ 21ಬಿ) ಅವರು ಇನ್ನೂ ತಮ್ಮನ್ನು ತಾವು ಒಪ್ಪಿಸಿಕೊಳ್ಳುವ ಮತ್ತು ಫಲಿತಾಂಶವನ್ನು ತೆಗೆದುಕೊಳ್ಳುವ ರೀತಿಯಲ್ಲಿ ಇರಲಿಲ್ಲ.
3. ಎಲೀಯನು ಪ್ರತಿಪಾದನೆಯನ್ನು ಮಾಡಿದನು (ವಚನಗಳು 22-24ಎ)!

a. ಬಾಳನು ನಿಸರ್ಗದ ದೇವರಾಗಿದ್ದನು ಎಂಬುದನ್ನು ನೆನೆಪಿಡಿರಿ. ಸೂರ್ಯನು ಆತನ ಕಿರೀಟವಾಗಿರಬಹುದು.
b. ಒಂದು ವೇಳೆ ಇದು ನಿಜಾವಾಗಿದ್ದರೆ ಬೆಂಕಿಯನ್ನು ಕಳಿಸುವದು ಅವನಿಗೆ ಮಕ್ಕಳಾಟಿಕೆ ಆಗಿತ್ತು.
4. ಜನರು ಒಪ್ಪಿದರು (ವಚನ 24ಬಿ). NASB ಯಲ್ಲಿ "ಅದು ಒಳ್ಳೇಯ ವಿಚಾರ" ಎಂದಿದೆ.

V. ದೈವ ಶಾಸ್ತ್ರೀಯ ಎದುರಿಸುವಿಕೆ (18:25-29)
A. ಮೊದಲ ಬಾರಿ ಎಲೀಯನು ಬಾಳನ ಪ್ರವಾದಿಗಳೊಂದಿಗೆ ನೇರವಾಗಿ ಮಾತನಾಡಿದನು (ವಚನ 25).
1. ಆತನು ಅವರಿಗೆ ಪ್ರಸ್ತಾವನೆಯು ಸರಿಯಾಗಿರುವುದರ ಬಗೆಗೆ ಯೋಚಿಸಲು ಅವರಿಗೆ ಕೇಳಿರಲಿಲ್ಲ; ಬದಲಾಗಿ ಆತನು ಅವರಿಗೆ ಆಜ್ಞೆ ಮಾಡಿದನು.
2. ಅವರು ಅದನ್ನು ಮಾಡಬೇಕಿತ್ತು ಅಥವಾ ತಮ್ಮ ತಪ್ಪಿನಿಂದಾದ ಸೋಲು ಎಂದು ಜನರೆದುರು ಒಪ್ಪಿಕೊಳ್ಳಬೇಕಿತ್ತು.
B. ವಚನ 26 ರಿಂದ 29 ರಲ್ಲಿ ದುಃಖದ ದೃಷ್ಯಾವಳಿಯ ಧ್ವನಿಯನ್ನು ಮತ್ತು ದುರಭಿಮಾನದ ಧರ್ಮದ ಕ್ರೋಧವನ್ನು ನೋಡುತ್ತೇವೆ.
1. ಅನೇಕರು ಒಂದು ಪ್ರದರ್ಶನದಿಂದ ಅಥವಾ ಕಾರ್ಯವುಳ್ಳವರೂ ದೊಡ್ಡ ಪ್ರದರ್ಶನವನ್ನು ಇಡುವವರೂ ಆಗಿದ್ದರು.
2. ಎಲೀಯನ ಅಪಹಾಸ್ಯವು (ವಚನ 27) ಎರಡು ಬಗೆಯ ಉದ್ದೇಶವನ್ನು ಹೊಂದಿತ್ತು.
a. ಆತನು ವಿಗ್ರಹ ಧರ್ಮದ ಬಲಹೀನತೆಯನ್ನು ತೋರಿಸಿದನು.
b. ಆತನು ಈ ಗಲಾಟೆಯಿಂದ ಹಿಡಿಯಲ್ಪಟ್ಟ ಜನರನ್ನು ತೋರಿಸುತ್ತಾ ಎಂಥಾ ಹಾಸ್ಯಸ್ಪದವಾದ ಕೃತಿಗಳನ್ನು ಪ್ರವಾದಿಗಳು ಮಾಡುತ್ತಾರೆಂದು ಜನರಿಗೆ ತೋರಿಸುವುದೇ ಮತ್ತು ಅದನ್ನು ಭಗ್ನಗೊಳಿಸುವುದೇ ಆಗಿತ್ತು.

VI. ನಿರ್ಧಾರದ ಸಂಧಿಸುವಿಕೆ (18:30-35).
A. ಈಗ ಎಲೀಯನ ಸರದಿ. ನಂತರ ಎಲೀಯನು ಎಲ್ಲಾ ಜನರನ್ನು ತಿರುಗಿ ಜೊತೆಯಾಗಿ ಕೂಡಿಸಿದನು.
B. ಅವನು ಹಾಳಾಗಿದ್ದ ಅಲ್ಲಿನ ಯೆಹೋವನ ವೇದಿಯನ್ನು ತಿರುಗಿ ಕಟ್ಟಿಸಿದನು.
C. ಬಲಿಯನ್ನು ಸಿದ್ಧಪಡಿಸಿದನು ಮತ್ತು ಅದು ಯಾವುದೇ ತಂತ್ರಕ್ಕೆ ಒಳಗಾಗದಂತೆ ಅದನ್ನು ಪದೇ ಪದೇ ಒದ್ದೆ ಮಾಡಿದನು. (ಹತ್ತಿರದಲ್ಲೇ ಇದ್ದ ಸಮುದ್ರದಲ್ಲಿ ಬಹುವಾಗಿ ನೀರಿತ್ತು.)
D. ಆತನು ಜನರನ್ನು ನಿರ್ಧಾರದ ಸಮಯಕ್ಕಾಗಿ ಸಿದ್ಧಪಡಿಸಿದನು.

VII. ಪ್ರಾರ್ಥನಾ ಪೂರಕವಾದ ಸಂಧಿಸುವಿಕೆ (18:36-39)
A. ಎಲೀಯನು ತಿರುಗಿ ತನ್ನ ದೇವರ ಎದುರಿನಲ್ಲಿ ಇದ್ದಾನೆ. ಬಾಳನ ಪ್ರವಾದಿಗಳು ಕೂಗುವುದರಲ್ಲಿ ಅರೇಳು ತಾಸಿನಿಂದ ತಲ್ಲೀನರಾಗಿದಾದರೆ. ಇನ್ನೊಂದೆಡೆ ಎಲೀಯನು ಎರಡು ವಚನಗಳ ಉದ್ದದ ಸರಳವಾದ ಪ್ರಾರ್ಥನೆಯನ್ನು ಹೇಳುತ್ತಾನೆ (ವಚನಗಳು 36, 37).
B. ಕೂಡಲೇ ಯೆಹೋವನ ಕಡೆಯಿಂದ ಬೆಂಕಿಯು ಬಿದ್ದು ಯಜ್ಞಮಾಂಸವನ್ನೂ ಕಟ್ಟಿಗೆಕಲ್ಲು ಮಣ್ಣುಗಳನ್ನೂ ದಹಿಸಿಬಿಟ್ಟು ಕಾಲಿವೆಯಲ್ಲಿದ್ದ ನೀರನ್ನೆಲ್ಲಾ

ಹೀರಿಬಿಟ್ಟಿತು (ವಚನ 38).

C. ವರ್ಷದಲ್ಲಿ ಮೊದಲನೆಯ ಸಾರಿ ಯೆಹೋವನ ಹೆಸರು ಜನರ ತುಟಿಯ ಮೇಲೆ ಇತ್ತು (ವಚನ 39)!

VIII. ಪ್ರಯೋಗಿಕ ಸಂಧಿಸುವಿಕೆ (18:40)

A. ಬಾಳನ ಪ್ರವಾದಿಗಳು ಕೊಲ್ಲಲ್ಪಟ್ಟರು.

B. ಆತ್ಮೀಕ ಅತ್ಯುಗ್ರತೆಗೆ ಪರಿಣಾಮಕಾರಿ ಶಸ್ತ್ರ ಚಿಕಿತ್ಸೆಯ ಅವಶ್ಯಕತೆಯು ಇದೆ: ಇದೆಲ್ಲವನ್ನು ತೆಗೆದುಕೊಳ್ಳಿ; ಯಾವುದೊಂದನ್ನೂ ತಪ್ಪಿಸಿಕ್ಕೊಳ್ಳಬೇಡಿರಿ.

**ಮುಕ್ತಾಯ**

A. ಇಂದು ನಾವು ಇನ್ನೂ ಅನೇಕ ತೆರನಾದ ಗುಂಪುಗಳನ್ನು ಹೊಂದಿದ್ದೇವೆ:

1. ಎಲೀಯನಂತವರು: ದೇವರಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡು ಮತ್ತು ಆತನ ಚಿತ್ತದ ಪ್ರಕಾರ ಮಾಡುವರು
2. ಬಾಳನ ಪ್ರವಾದಿಯಂತವರು: ಪಾಪದಿಂದ ಕಠಿಣರಾದವರು ಅನೈತಿಕ ಸಂಗತಿಗಳಿಗೆ ತಮ್ಮನ್ನು ಅರ್ಪಿಸಿಕೊಂಡರು
3. ಇಸ್ರಾಯೇಲರ ಮಕ್ಕಳಂತವರು: ದ್ವಿವಿದವಿಚಾರವುಳ್ಳವರು “ಎರಡು ಅಭಿಪ್ರಾಯಗಳ ಮಧ್ಯೆ ಹೊಳಾದಂತವರು” (KJV)

B. ನಾವು ನಮ್ಮನ್ನು ಮೂರನೆಯ ಗುಂಪಿನಲ್ಲಿ ಕಂಡುಕೊಳ್ಳುತ್ತೇವೆ. ಹೀಗಿದ್ದಾಗ ಈ ಪಾಠವು ನಮಗೆ ಒಳ್ಳೇಯ ಪಾಠವನ್ನು ಕೊಡುತ್ತದೆ.

1. ಕ್ರೈಸ್ತರಾದ ನಾವು ಸಂಪೂರ್ಣವಾಗಿ ದೇವರಿಗರ್ಪಿಸುವಂತೆ ನಮ್ಮ ಮನಸ್ಸನ್ನು ಸಿದ್ಧಮಾಡಿಕೊಳ್ಳಬೇಕು!
2. ನಮ್ಮನ್ನು ಒಲಿಸಲು ಪರಲೋಕದಿಂದ ಯಾವುದೇ ತೆರನಾದ ಬೆಂಕಿಯು ಬರುವುದಿಲ್ಲ, ಆದರೆ ದೇವರ ವಾಕ್ಯವು ಬೆಂಕಿಯೋ ಪಾದಿಯಲ್ಲಿ ಇದೆ (ಯೆರಮೀಯ 5:14; 23:29); ಅದು ಶಕ್ತಿಯುತವಾದುದು! ರೋಮಾಪುರ 1:16 ಹೇಳುವಂತೆ ಸುವಾರ್ತೆಯು “ದೇವರ ಬಲಸ್ವರೂಪವಾಗಿದ್ದು ... ನಂಬುವವರೆಲ್ಲರಿಗೂ ರಕ್ಷಣೆಯುಂಟುಮಾಡುವಂತದ್ದಾಗಿದೆ.”
3. ದೇವರು ಇನ್ನೂ ಸಮರ್ಪಣಾಭಾವದ ಜನರನ್ನು ಎದುರು ನೋಡುತ್ತಿದ್ದಾನೆ!